# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 20-06-2024ರ ಪೂರ್ವಾಹ್ನ 11.00 ಗಂಟೆಗೆ ನಡೆದ "ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆ"ಯ ನಡವಳಿ.**

**ಉಪಸ್ಥಿತರು:**

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಪ್ರೊ. ಸೊನರ್ ನಂದಪ್ಪ – ಸದಸ್ಯರು
3. ಶ್ರೀ ಕೆ.ಗೋಕುಲ್ ಗೋವರ್ಧನ್ – ಸದಸ್ಯರು
4. ಡಾ. ಅಂತೋಣಿ ಪೌಲ್ ರಾಜ್ ಸಿ – ಸದಸ್ಯರು
5. ಡಾ. ಮುಜ್ಹೀದ ಬಾನು – ಸದಸ್ಯರು
6. ಶ್ರೀ ಮಹದೇಶು – ಸದಸ್ಯರು
7. ಶ್ರೀ ನಾಗರಾಜು ಸಿ – ಸದಸ್ಯರು
8. ಡಾ. ಬಸವರಾಜು ಸಿ – ಸದಸ್ಯರು
9. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ – ಸದಸ್ಯರು
10. ಡಾ. ಶಿಲ್ಪ ಜೆ – ಸದಸ್ಯರು
11. ಶ್ರೀ ನಟರಾಜು ಹೆಚ್ ಎಸ್ – ಸದಸ್ಯರು
12. ಡಾ. ಬಸಪ್ಪ, ಕುಲಸಚಿವ (ಪರೀಕ್ಷಾಂಗ) – ಸದಸ್ಯರು
13. ಶ್ರೀಮತಿ ವಿ.ಆರ್. ಶೈಲಜ, ಕುಲಸಚಿವರು – ಸದಸ್ಯ ಕಾರ್ಯದರ್ಶಿ
14. ಶ್ರೀಮತಿ ರೇಖಾ ಕೆ.ಎಸ್, ಹಣಕಾಸು ಅಧಿಕಾರಿ – ವಿಶೇಷ ಆಹ್ವಾನಿತರು

**ಅನುಪಸ್ಥಿತರು**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
   ಪ್ರೊ. ಎ.ಹೆಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
3. ಡಾ. ಟಿ.ಆರ್.ಚಂದ್ರಶೇಖರ್
4. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್
5. ಡಾ. ಗಣೇಶ್ ಕೆ
7. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
8. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
9. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಸಚಿವರು ಸಿಂಡಿಕೇಟ್ ಸಭೆಯ ಅಧ್ಯಕ್ಷತೆ ವಹಿಸಿಕೊಂಡಿರುವ ಪ್ರೊ. ಎನ್.ಕೆ. ಲೋಕನಾಥ್ ಹಾಗೂ ಉಪಸ್ಥಿತರಾಗಿರುವ ಸದಸ್ಯರುಗಳನ್ನು ಸ್ವಾಗತಿಸಿದರು.

ತದನಂತರ ಕಾರ್ಯಸೂಚಿಯನ್ನು ಈ ಕೆಳಕಂಡಂತೆ ಮಂಡಿಸಲಾಯಿತು.

| **ವಿಷಯ ಸಂಖ್ಯೆ** | **ವಿಷಯ ಸಂಕ್ಷಿಪ್ತವಾಗಿ** |
|---|---|
| ದಿನಾಂಕ: 13-03-2024 ರಂದು ಜರುಗಿದ "ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. | |
| **ತೀರ್ಮಾನ** | **ದಿನಾಂಕ: 13-03-2024 ರಂದು ಜರುಗಿದ "ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆ"ಯ ನಡವಳಿಯನ್ನು ಮತ್ತು ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.** |

| | |
|---|---|
| ಸಾಮಾನ್ಯ ಸಭೆ 2024/3.1 | ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ವೀಣಾ ಮಠದ್, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಮಾನಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01–06–2024 ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಗಣಿತಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/3.2 | ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಹಾಗೂ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗದ ದೈನಂದಿನ ಕೆಲಸ ಕಾರ್ಯಗಳು ಸುಲಲಿತವಾಗಿ ಜರುಗಬೇಕೆನ್ನುವ ದೃಷ್ಟಿಯಿಂದ ಡಾ. ಎಸ್.ಎಸ್. ಮಾಲಿನಿ, ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 30–05–2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/3.3 | ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| | ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು–1), ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ: ಇಡಿ 520 ಯುಬಿವಿ 2023, ದಿನಾಂಕ: 15–03–2024 ರನ್ವಯ ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರಾದ ಡಾ. ಬಸಪ್ಪ ಇವರು ದಿನಾಂಕ: 15–03–2024 ರಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ)ರಾಗಿ ಕರ್ತವ್ಯದ ಮೇಲೆ ವರದಿ ಮಾಡಿಕೊಂಡಿರುತ್ತಾರೆ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಹಾಗೂ ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ದೈನಂದಿನ ಕೆಲಸ ಕಾರ್ಯಗಳು ಸುಲಲಿತವಾಗಿ ಜರುಗಬೇಕೆನ್ನುವ ದೃಷ್ಟಿಯಿಂದ ಡಾ. ಮಂಟೇಲಿಂಗು, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 05–04–2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/3.4 | ಪರಿಸರ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಹಾಗೂ ಪ್ರೊ. ಎನ್.ಎಸ್.ರಾಜು, ಪ್ರಾಧ್ಯಾಪಕರು, ಪರಿಸರ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 20–05–2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |

| | |
|---|---|
| ಸಾಮಾನ್ಯ ಸಭೆ 2024/3.5 | ಪರೀಕ್ಷೆ ಕಾರ್ಯಗಳನ್ನು ನಿರ್ವಹಿಸುವ ಸಿಬ್ಬಂದಿ ವರ್ಗದವರಿಗೆ ಗೌರವಧನ ನೀಡುವ ಕುರಿತು. |
| ತೀರ್ಮಾನ | **ಸ್ನಾತಕ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳು ವರ್ಷದಲ್ಲಿ ಎರಡು ಬಾರಿ ಜರುಗುವ ಸಂದರ್ಭದಲ್ಲಿ ತಮ್ಮ ದೈನಂದಿನ ಕೆಲಸಕಾರ್ಯಗಳೊಂದಿಗೆ ಹೆಚ್ಚುವರಿಯಾಗಿ ಕಛೇರಿ ಸಮಯದ ಮೊದಲು ಹಾಗೂ ಕಛೇರಿ ಸಮಯದ ನಂತರವೂ ಕೆಲಸ ಮಾಡುವ ಪರೀಕ್ಷಾ ವಿಭಾಗದ ಉದ್ಯೋಗಿಗಳಿಗೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಹೆಚ್ಚುವರಿ ಗೌರವಧನ/ ಸಂಭಾವನೆಯನ್ನು ಪಾವತಿಸಲು ಹಾಗೂ ಪಾವತಿಸಿದ ಮೊತ್ತಕ್ಕೆ ಆಡಿಟ್ ಆಕ್ಷೇಪಣೆಯಾದಲ್ಲಿ ಸದರಿ ಉದ್ಯೋಗಿಗಳ ವೇತನದಲ್ಲಿ ಕಟಾಯಿಸಲು ಷರತ್ತುಬದ್ಧ ಆದೇಶವನ್ನು ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು**. |
| ಸಾಮಾನ್ಯ ಸಭೆ 2024/3.6 | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು. |
| ತೀರ್ಮಾನ | **ಡಿಸೆಂಬರ್ 2023/ಜನವರಿ 2024 ರಲ್ಲಿ ನಡೆದ ಪದವಿ ಪರೀಕ್ಷೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಪರೀಕ್ಷಾ ಅಕ್ರಮದ ಆರೋಪಕ್ಕೆ ಒಳಗಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂ.ಪಿ.ಎಲ್.ಇ ಸಮಿತಿಯು ವಿಚಾರಣೆ ನಡೆಸಿ ಸಲ್ಲಿಸಿರುವ ವರದಿಯನ್ನು/ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು**. |
| ಸಾಮಾನ್ಯ ಸಭೆ 2024/3.7 | ಪ್ರೊ. ಶಾಲಿನಿ ಆರ್. ಅರಸ್, ನಿವೃತ್ತ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಜಿಎಸ್‌ಟಿ, ಬೆಂಗಳೂರು ಇವರಿಂದ ಯೋಜನೆಯನ್ನು ಕೈಗೊಳ್ಳಲು ಅನುದಾನವನ್ನು ಪಡೆದಿರುವ ಸಂಬಂಧ ಹಿಂದಿರುಗಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ ಪ್ರೊ. ಶಾಲಿನಿ ಆರ್. ಅರಸ್, ನಿವೃತ್ತ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಜಿಎಸ್‌ಟಿ, ಬೆಂಗಳೂರು ಇವರಿಂದ ಯೋಜನೆಯನ್ನು ಕೈಗೊಳ್ಳಲು ಪಡೆದಿರುವ ಅನುದಾನವನ್ನು ಹಿಂದಿರುಗಿಸುವ ವಿಷಯವನ್ನು ಸಭೆಗೆ ವಿವರಿಸುತ್ತಾ, ಪ್ರೊ. ಶಾಲಿನಿ ಅರಸ್ ಅವರು ಕರ್ನಾಟಕ ಸರ್ಕಾರದ ಕೆ-ಸ್ಟೆಪ್ಸ್ ಅಡಿಯಲ್ಲಿ ಬರುವ ವಿಜಿಎಸ್‌ಟಿ, ಬೆಂಗಳೂರು ರವರಿಂದ "Cloud Computing Research & Training Facility" ಯೋಜನೆಗೆ ರೂ. 10.00 ಲಕ್ಷಗಳನ್ನು ಪಡೆದಿದ್ದು, ಸದರಿ ಯೋಜನೆಗೆ ಸಂಬಂಧಿಸಿದಂತೆ ಪ್ರೊ. ಶಾಲಿನಿ ಆರ್. ಅರಸ್ ಅವರು ಯಾವುದೇ ಮಾಹಿತಿ/ದಾಖಲಾತಿಗಳು, ಬಳಕೆ ಪ್ರಮಾಣ ಪತ್ರ, ವೆಚ್ಚಪಟ್ಟಿ ಮತ್ತು ಅಂತಿಮ ವರದಿಯನ್ನು ಸಲ್ಲಿಸದೆ ನಿರ್ಲಕ್ಷತೆ ತೋರಿರುವ ಸಂಬಂಧ ಅನುದಾನ ಸಂಸ್ಥೆಯು ಯೋಜನೆಯ ಅನುದಾನವನ್ನು ಹಿಂತಿರುಗಿಸದಿದ್ದಲ್ಲಿ, ಅಂತಹ ಸಂಸ್ಥೆಗಳ ಚಾಲನೆಯಲ್ಲಿರುವ ಯೋಜನೆಗಳ ಅನುದಾನವನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡದಿರುವಂತೆ ಹಾಗೂ ಹೊಸ ಯೋಜನೆಗಳಿಗೆ ಮಂಜೂರಾತಿ ನೀಡದಿರುವಂತೆ ತಿಳಿಸಿದ್ದು, ಹಾಗೂ ಸರ್ಕಾರವು ಅಂತಹ ಸಂಸ್ಥೆಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಸಮ್ಮುಖದಲ್ಲಿ ಸಭೆಯನ್ನು ನಡೆಸಿ ಪ್ರೊ. ಶಾಲಿನಿ ಆರ್. ಅರಸ್ ಅವರೊಂದಿಗೆ ಮಾತನಾಡಲಾಗಿದೆ. ಸದರಿ ವಿಷಯದ ಬಗ್ಗೆ ಹಲವಾರು ಬಾರಿ ತಗಾದೆಗಳು ಬರುತ್ತಿದೆ. ಜೊತೆಗೆ ವಿಜಿಎಸ್‌ಟಿ ಅಡಿಯಲ್ಲಿ ಕೈಗೊಂಡಿರುವ ಇತರೆ ಯೋಜನೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುವುದಿಲ್ಲ ಹಾಗೂ ಯಾವ ಯಾವ ವಿಶ್ವವಿದ್ಯಾನಿಲಯದಿಂದ ಯೋಜನೆಗೆ ಸಂಬಂಧಿಸಿದ ಮಾಹಿತಿ ಬಂದಿರುವುದಿಲ್ಲವೋ ಅಂತಹ ವಿಶ್ವವಿದ್ಯಾನಿಲಯಗಳ ಹೊಸ ಯೋಜನೆಗಳ ಪ್ರೊಪೋಸಲ್‌ಗಳನ್ನು ಅಂಗೀಕರಿಸಲಾಗುವುದಿಲ್ಲವೆಂದು ತಿಳಿಸಿದ್ದಾರೆ.<br><br>ಮುಂದುವರೆದು ಪ್ರಸ್ತುತ ವಿಜಿಎಸ್‌ಟಿ ರವರಿಂದ "Cloud Computing Research & Training Facility" ಯೋಜನೆಗೆ ಪಡೆದಿರುವ ರೂ. 10.00 ಲಕ್ಷಗಳನ್ನು ಹಿಂದಿರುಗಿಸಬೇಕು ಇಲ್ಲವೇ ದಾಖಲಾತಿಗಳನ್ನು ನೀಡಬೇಕಾಗುತ್ತದೆ. ಪ್ರೊ. ಶಾಲಿನಿ ಆರ್. ಅರಸ್ ಅವರು ಅನುದಾನವನ್ನು ಹಿಂದಿರುಗಿಸಲು ಅಥವಾ ಮಾಹಿತಿಯನ್ನು ನೀಡಲು ಒಪ್ಪುತ್ತಿಲ್ಲ. ಆದ್ದರಿಂದ ಪ್ರೊ. ಶಾಲಿನಿ ಆರ್ ಅರಸ್ ಅವರು ವಿಶ್ವವಿದ್ಯಾನಿಲಯದಿಂದ ನಿವೃತ್ತಿ ಸೌಲಭ್ಯದ ವಂತಿಕೆಯಾಗಿ ತಡೆಹಿಡಿಯಲಾಗಿರುವ ಗಳಿಕೆ ರಜೆಯ ನಗದೀಕರಣವಾಗಿ ಪಾವತಿಸಬೇಕಾಗಿರುವ ಮೊತ್ತದಿಂದ ರೂ. 10.00 ಲಕ್ಷಗಳನ್ನು ಕಡಿತಗೊಳಿಸಿ, ವಿಜಿಎಸ್‌ಟಿ |

ಸಂಸ್ಥೆಗೆ ಪಾವತಿಸಲು ತೀರ್ಮಾನಿಸಲಾಗಿರುವ ಅಂಶವನ್ನು ಹಾಗೂ ಈ ವಿಷಯವನ್ನು ಸದರಿ ಪ್ರಾಧ್ಯಾಪಕರ ಗಮನಕ್ಕೂ ತಂದಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. ವಿಜಿಎಸ್‌ಟಿ ಸಂಸ್ಥೆಯ ಹಿರಿಯ ಅಧಿಕಾರಿಗಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲೂ ವಿಶ್ವವಿದ್ಯಾನಿಲಯಕ್ಕೆ ಸಹಾಯ ಮಾಡುತ್ತೇವೆ, ಆದರೆ ವಿಶ್ವವಿದ್ಯಾನಿಲಯದ ಯೋಜನೆಗೆ ನೀಡಿರುವಂತಹ ಅನುದಾನದ ಬಳಕೆಯ ಮಾಹಿತಿ ಅಥವಾ ವಿಶ್ವವಿದ್ಯಾನಿಲಯವು ನಿಗಧಿತ ಅವಧಿಯೊಳಗೆ ಅನುದಾನವನ್ನು ಬಳಸದಿದ್ದಲ್ಲಿ ಅಂತಹ ಅನುದಾನವನ್ನು ಹಿಂದಿರುಗಿಸಬೇಕಾಗುತ್ತದೆ ಎಂದು ತಿಳಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಡಾ. ಸಿ. ಬಸವರಾಜು ಹಾಗೂ ಡಾ. ಶಿಲ್ಪಾ ಜೆ ಅವರು ಮಾತನಾಡಿ, ಅವರ ಸ್ವಂತ ಹಣದಿಂದ ಅನುದಾನವನ್ನು ಭರಿಸಲಾಗುತ್ತಿದೆಯೇ ಹಾಗೂ ಅವರು ಯೋಜನೆಗೆ ಸಂಬಂಧಿಸಿದ ಯಾವ ಮಾಹಿತಿಯನ್ನು ವಿಶ್ವವಿದ್ಯಾನಿಲಯಕ್ಕೆ ನೀಡಿಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಶಾಲಿನಿ ಆರ್. ಅರಸ್ ಅವರು ವಿಶ್ವವಿದ್ಯಾನಿಲಯದಿಂದ ಸುಮಾರು 7-8 ವರ್ಷಗಳ ಹಿಂದೆ ನಿವೃತ್ತಿಯಾಗಿದ್ದಾರೆ. ಈ ಸಂಬಂಧ ವಿಶ್ವವಿದ್ಯಾನಿಲಯದಿಂದ ಹಲವು ಬಾರಿ ಪತ್ರ ವ್ಯವಹಾರ ನಡೆಸಲಾಗಿದೆ. ಆದರೆ ಪ್ರೊ. ಶಾಲಿನಿ ಆರ್. ಅರಸ್ ಅವರು ಇದುವರೆಗೂ ಯೋಜನೆಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳನ್ನಾಗಲಿ ಅಥವಾ ಅನುದಾನವನ್ನು ಹಿಂದಿರುಗಿಸಿರುವುದಿಲ್ಲ. ಆದ್ದರಿಂದ ವಿಜಿಎಸ್‌ಟಿ ರವರು ಯೋಜನೆಗೆ ನೀಡಿರುವ ಹಣವನ್ನು ಹಿಂದಿರುಗಿಸಬೇಕು ಅಥವಾ ಬಳಸಿಕೊಂಡಿರುವ ಹಣಕ್ಕೆ ದಾಖಲಾತಿಯನ್ನು ನೀಡಲೇಬೇಕು ಎಂದಿರುವುದರಿಂದ ಸದರಿ ಪ್ರಾಧ್ಯಾಪಕರ ಗಳಿಕೆ ರಜೆಯ ಮೊತ್ತದ ಹಣದಿಂದ ರೂ.10.00 ಲಕ್ಷಗಳನ್ನು ಕಡಿತಗೊಳಿಸಿ ವಿಜಿಎಸ್‌ಟಿ ಅವರಿಗೆ ಹಿಂದಿರುಗಿಸಬೇಕಾಗಿರುತ್ತದೆ. ಜೊತೆಗೆ ಶ್ರೀಯುತರು ಯಾವುದೇ ಹಣವನ್ನು ಬಳಸಿಕೊಂಡಿರುವುದಿಲ್ಲವೆಂದು ಈ ಹಣವು ವಿಶ್ವವಿದ್ಯಾನಿಲಯದ ಹಣಕಾಸು ಶಾಖೆಯಲ್ಲಿಯೇ ಇರುತ್ತದೆಯೆಂದು ತಿಳಿಸಿರುತ್ತಾರೆ. ಪ್ರೊ. ಶಾಲಿನಿ ಆರ್. ಅರಸ್ ಅವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಯೋಜನೆಗೆ ಸಂಬಂಧಿಸಿದಂತೆ ಪ್ರತ್ಯೇಕ ಖಾತೆಯನ್ನು ತೆರೆದಿದ್ದು, ಆ ಖಾತೆಗೆ ಯೋಜನೆಯ ಹಣವು ಹೋಗಿರುತ್ತದೆ. ಆದರೆ ಅವರು ಯಾವುದೇ ಮಾಹಿತಿಯನ್ನು ನೀಡುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಈ ಯೋಜನೆಗೆ ಸಂಬಂಧಿಸಿದ ಅನುದಾನದ ಮೊತ್ತವು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಯಾವುದೇ ಖಾತೆಯಲ್ಲಿಯೂ ಇರುವುದಿಲ್ಲವೆಂದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ವಿಭಾಗಗಳ ಯೋಜನೆಗೆ ಸಂಬಂಧಿಸಿದಂತೆ ಅನುದಾನವನ್ನು ಪಡೆದು ಅವರು ಮಾಹಿತಿಯನ್ನು ನೀಡದೆ, ಅನುದಾನವನ್ನು ಹಿಂದಿರುಗಿಸದೆ ವಿಶ್ವವಿದ್ಯಾನಿಲಯದ ಎಲ್ಲಾ ಸೌಲಭ್ಯಗಳನ್ನು ಪಡೆದು ನಂತರ ಯಾವ ಸಂಸ್ಥೆಯು ಅನುದಾನವನ್ನು ನೀಡಿರುತ್ತದೆಯೋ ಆ ಸಂಸ್ಥೆಯವರು ದಾಖಲಾತಿ ಅಥವಾ ಅನುದಾನವನ್ನು ಹಿಂದಿರುಗಿಸಿ ಎಂದು ಕೇಳಿದಂತಹ ಸಂದರ್ಭಗಳಲ್ಲಿ ಹಲವಾರು ಪ್ರಾಧ್ಯಾಪಕರು ನಿವೃತ್ತಿ ಹೊಂದಿದಾಗ ಅಂತಹವರ ವಿರುದ್ಧ ವಿಶ್ವವಿದ್ಯಾನಿಲಯವು ಯಾವ ಕ್ರಮವನ್ನು ಕೈಗೊಳ್ಳುತ್ತಿದೆ ಹಾಗೂ ಪ್ರಸ್ತುತ ವಿಜಿಎಸ್‌ಟಿಯವರು ಸದರಿ ಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ಕೇಳಿದ್ದರಿಂದ ವಿಷಯವು ಗೊತ್ತಾಗಿದೆ ಇಲ್ಲವಾದಲ್ಲಿ ಇಂತಹ ಪ್ರಸಂಗಗಳು ನಡೆದಾಗ ಯಾವ ರೀತಿಯ ಕ್ರಮವನ್ನು ಕೈಗೊಳ್ಳುತ್ತೀರಿ ಎಂದು ಸಭೆಯಲ್ಲಿ ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, 2017ರಿಂದೀಚೆಗೆ ಯಾವುದೇ ಯೋಜನೆಗೆ ಸಂಬಂಧಿಸಿದ ಮೊತ್ತವು ಹಣಕಾಸು ವಿಭಾಗಕ್ಕೆ ಬರುತ್ತಿದೆ. ನಂತರ ಆ ಯೋಜನೆಗೆ ಸಂಬಂಧಿಸಿದ ವಿಭಾಗಗಳಿಗೆ ಹೋಗಿರುತ್ತದೆ. ಇದಕ್ಕೆ ಮೊದಲು ಯೋಜನೆಯನ್ನು ಪಡೆದಂತಹ ಪ್ರಾಧ್ಯಾಪಕರುಗಳ ಖಾತೆಗೆ ನೇರವಾಗಿ ಹಣವು ಸಂದಾಯವಾಗುತ್ತಿತ್ತು ಎಂದು ತಿಳಿಸಿದರು.

| | |
|---|---|
| | ಹಣಕಾಸು ಅಧಿಕಾರಿಗಳು ಮಾತನಾಡಿ ಮೊದಲು ಹಣಕಾಸು ಶಾಖೆಯ ಆಯಾ ಯೋಜನೆಗೆ ಸಂಬಂಧಿಸಿದ ಖಾತೆಗಳಿಗೆ ಅನುದಾನದ ಮೊತ್ತವು ಬರುತ್ತದೆ. ತದನಂತರ ಆಯಾ ಯೋಜನೆಗೆ ಸಂಬಂಧಿಸಿದ ಅಧ್ಯಯನ ವಿಭಾಗಗಳಿಗೆ ಹೋಗಿರುತ್ತದೆ ಎಂದು ತಿಳಿಸಿದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ, ಉದಾಹರಣೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಅಥವಾ ಇನ್ನಿತರೆ ಅಧ್ಯಯನ ವಿಭಾಗಗಳ ನಿರ್ದೇಶಕರು/ಅಧ್ಯಕ್ಷರುಗಳಿಗೆ ಪ್ರತ್ಯೇಕವಾದ ಖಾತೆ ಇರುತ್ತದೆಯೇ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಎಲ್ಲಾ ಅಧ್ಯಯನ ವಿಭಾಗಗಳು/ಕೇಂದ್ರಗಳ ಹೆಸರಿನಲ್ಲಿ ಪ್ರತ್ಯೇಕವಾದ ಖಾತೆಗಳಿರುತ್ತದೆ ಎಂದು ಸಭೆಗೆ ತಿಳಿಸಿದರು. ಜೊತೆಗೆ ಪ್ರತಿ ಯೋಜನೆಗೂ ಬಳಕೆ ಪ್ರಮಾಣ ಪತ್ರ ಮತ್ತು ಅಂತಿಮ ವರದಿಯನ್ನು ಸಲ್ಲಿಸಬೇಕಾಗುತ್ತದೆ. ಹಾಗೆಯೇ ಪ್ರತಿ ಯೋಜನೆಯ ಪೂರ್ಣ ಪ್ರಮಾಣದ ದಾಖಲಾತಿ/ಮಾಹಿತಿಯನ್ನು ಒದಗಿಸಿದ ನಂತರವೇ ಅಂತಹ ಪ್ರಾಧ್ಯಾಪಕರುಗಳ ಪಿಂಚಣಿ ಸೌಲಭ್ಯವನ್ನು ಪೂರ್ಣ ಪ್ರಮಾಣದಲ್ಲಿ ನೀಡಲಾಗುತ್ತದೆ ಎಂದು ತಿಳಿಸಿದರು. ಯಾವುದೇ ಪ್ರಾಜೆಕ್ಟ್‌ಗಳು ಬಂದಂತಹ ಸಂದರ್ಭದಲ್ಲಿ ಅದು ಕೇವಲ ಒಂದು ವರ್ಷಕ್ಕೆ ಸೀಮಿತವಾಗಿರುವುದಿಲ್ಲ, ಮೂರು–ಐದು ವರ್ಷಗಳ ಪ್ರಾಜೆಕ್ಟ್ ಇರುತ್ತದೆ. ಪ್ರತಿ ವರ್ಷಕ್ಕೊಮ್ಮೆ ಪ್ರಾಜೆಕ್ಟ್ (ಯುಸಿ)ನ ಬಳಕೆ ಪ್ರಮಾಣ ಪತ್ರವನ್ನು ನೀಡಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು.<br><br>ಶ್ರೀ ಸಿ. ನಾಗರಾಜು ರವರು ಮಾತನಾಡಿ ಯಾವುದೇ ಪ್ರಾಜೆಕ್ಟ್‌ನ ಅನುದಾನದ ಹಣವನ್ನು ಕಟ್ಟದೇ ಇದ್ದಂತಹ ಸಂದರ್ಭದಲ್ಲಿ ಅಥವಾ ಅಂತಹ ಪ್ರಾಧ್ಯಾಪಕರು ಅನುದಾನವನ್ನು ಭರಿಸದೆ ನಿಧನ ಹೊಂದಿದ ಸಂದರ್ಭದಲ್ಲಿ ಯಾವ ರೀತಿಯ ಕ್ರಮವನ್ನು ಕೈಗೊಳ್ಳುತ್ತೀರಿ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಸರ್ಕಾರದಿಂದಾಗಲಿ ಅಥವಾ ಯಾವುದೇ ಸಂಸ್ಥೆಯಿಂದಾಗಲಿ ಯೋಜನೆಗಳಿಗೆ ಸಂಬಂಧಿಸಿದ ಅನುದಾನವನ್ನು ಪಡೆದಂತಹ ಸಂದರ್ಭದಲ್ಲಿ ಅನುದಾನದ ಮೊತ್ತವನ್ನು ಹಿಂದಿರುಗಿಸಬೇಕು ಇಲ್ಲವಾದಲ್ಲಿ ಬಳಸಿಕೊಂಡಿರುವುದಕ್ಕೆ ದಾಖಲಾತಿಗಳನ್ನು ಒದಗಿಸಬೇಕಾಗುತ್ತದೆ. ಒದಗಿಸದಿದ್ದಲ್ಲಿ ಅಂತಹವರು ನಿವೃತ್ತಿಯಾದ ಸಂದರ್ಭದಲ್ಲಿ ಅವರಿಗೆ ಪಿಂಚಣಿಯನ್ನು ಮಾತ್ರ ನೀಡಿ, ಇತರೆ ಪಿಂಚಣಿ ಸೌಲಭ್ಯಗಳನ್ನು ತಡೆಹಿಡಿಯಲಾಗುತ್ತದೆ. ಅವರುಗಳು ಪೂರ್ಣ ಪ್ರಮಾಣದ ಬಳಕೆ ಪ್ರಮಾಣದ ಪತ್ರವನ್ನು ದಾಖಲಾತಿಯನ್ನು ನೀಡದಿದ್ದಲ್ಲಿ ಇತರೆ ಪಿಂಚಣಿ ಸೌಲಭ್ಯದಿಂದ ಅನುದಾನದ ಮೊತ್ತವನ್ನು ಕಡಿತಗೊಳಿಸಬಹುದೆಂದು ತಿಳಿಸಿದರು. ಯಾವ ಯೋಜನೆಗೆ ಅನುದಾನವನ್ನು ಪಡೆದಿರುತ್ತಾರೋ ಆ ಯೋಜನೆಗೆ ಮಾತ್ರ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ ಮುಂದೆ ಈ ರೀತಿಯ ವಿಷಯಗಳು ಪುನರಾವರ್ತನೆಯಾಗದಂತೆ ಕಠಿಣ ಕ್ರಮವನ್ನು ವಹಿಸುವಂತೆ ಮಾನ್ಯ ಕುಲಪತಿಗಳಲ್ಲಿ ಬಿನ್ನವಿಸಿದರು.<br><br>ಶ್ರೀ ನಟರಾಜು ಎಚ್.ಎಸ್. ಅವರು ಮಾತನಾಡಿ ಕೆಲವೊಂದು ವಿಭಾಗಗಳಲ್ಲಿ ನಿವೃತ್ತಿಯಾದ ಪ್ರಾಧ್ಯಾಪಕರುಗಳು ವಿಭಾಗದ ಕೀಗಳನ್ನೇ ನೀಡಿರುವುದಿಲ್ಲ, ಮತ್ತೆ ಅವರಲ್ಲಿರುವಂತಹ ಪೀಠೋಪಕರಗಳ ಹಾಗೂ ಇನ್ನಿತರೆ ಮಾಹಿತಿ/ದಾಖಲಾತಿಗಳನ್ನು ನೀಡಿರುವುದಿಲ್ಲವೆಂದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ ಕೆಲವರು ಪ್ರಾಧ್ಯಾಪಕರುಗಳು ನಿವೃತ್ತಿ ಹೊಂದಿದ್ದರೂ ಸಹ ಅವರಿಗೆ ನೀಡಿರುವಂತಹ ಕೊಠಡಿಯಲ್ಲಿಯೇ ಇರುತ್ತಾರೆ. ಇವರುಗಳಿಗೆ ಪಿಂಚಣಿಯು ಬರುತ್ತಿರುತ್ತದೆ. ಪಿಎಚ್.ಡಿ. ಮಾಡಿರುವಂತಹವರಿಗೆ ಅವಕಾಶ ಕೊಟ್ಟರೆ ಹೊಸಬರಿಗೆ ಉದ್ಯೋಗ ನೀಡಿದಂತಾಗುತ್ತದೆ ಎಂದು ತಿಳಿಸಿದರು. ಉದಾಹರಣೆಗೆ ಪ್ರೊ. ಹಾ.ತಿ. ಕೃಷ್ಣೇಗೌಡರಿಗೆ ಈಗಾಗಲೇ ಪಿಂಚಣಿಯನ್ನು ಪಡೆಯುತ್ತಿದ್ದು, ಅವರಿಗೆ ಕಾರ್ಯನಿರ್ವಾಹಕ ಸಂಪಾದಕರಾಗಿ ನೇಮಕ ಮಾಡಿ ವಿಶ್ವವಿದ್ಯಾನಿಲಯದಿಂದ |

| | |
|---|---|
| | ವೇತನವನ್ನು ನೀಡುತ್ತಿರುವುದು. ಇಂತಹ ಅವಕಾಶವನ್ನು ಉದ್ಯೋಗ ಅರಸಿಬಂದವರಿಗೆ ನೀಡಿದರೆ ಒಳತಾಗುತ್ತದೆ ಹಾಗೂ ಇಂತಹ ವಿಷಯಗಳು ಪುನರಾವರ್ತನೆಯಾಗದಂತೆ ಗಮನಹರಿಸಬೇಕು ಎಂದು ತಿಳಿಸಿದರು |
| **ತೀರ್ಮಾನ** | **ಪ್ರೊ. ಶಾಲಿನಿ ಆರ್. ಅರಸ್, ನಿವೃತ್ತ ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಜಿಎಸ್‌ಟಿ, ಬೆಂಗಳೂರು ಇವರಿಂದ "Cloud Computing Research & Training Facility" ಯೋಜನೆಗೆ ಪಡೆದಿರುವ ರೂ.10.00 ಲಕ್ಷಗಳ ಅನುದಾನದ ಮೊತ್ತವನ್ನು ಪ್ರೊ. ಶಾಲಿನಿ ಆರ್. ಅರಸ್ ರವರಿಂದ  ತಡೆಹಿಡಿಯಲಾಗಿರುವ ಗಳಿಕೆ ರಜೆಯ ನಗದೀಕರಣದ ಮೊತ್ತದಿಂದ ರೂ. 10.00 ಲಕ್ಷಗಳನ್ನು ಕಡಿತಗೊಳಿಸಿ ವಿಜಿಎಸ್‌ಟಿ, ಬೆಂಗಳೂರು ರವರಿಗೆ ಪಾವತಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ಸಾಮಾನ್ಯ ಸಭೆ 2024/3.8** | ಶ್ರೀ ಎಸ್.ಜೆ. ಶಿವಣ್ಣೇಗೌಡ, ಸಂಶೋಧನಾ ವಿದ್ಯಾರ್ಥಿ, ಕ್ರೀಡಾ ವಿಜ್ಞಾನ ಮತ್ತು ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಇವರು ಪ್ರೊ. ಮದಿ ಅಳಗನ್‌ರವರ ಮಾರ್ಗದರ್ಶನದಲ್ಲಿ ಮಹಾಪ್ರಬಂಧವನ್ನು ಸಲ್ಲಿಸಲು ಅನುಮತಿಯನ್ನು ಕೋರಿರುವ ಬಗ್ಗೆ. |
| | ಡಾ. ಬಸಪ್ಪ, ಕುಲಸಚಿವ (ಪರೀಕ್ಷಾಂಗ) ರವರು ಶ್ರೀ ಎಸ್.ಜೆ. ಶಿವಣ್ಣೇಗೌಡ, ಸಂಶೋಧನಾ ವಿದ್ಯಾರ್ಥಿ, ಕ್ರೀಡಾ ವಿಜ್ಞಾನ ಮತ್ತು ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಪ್ರೊ. ಮದಿಅಳಗನ್‌ರವರ  ಮಾರ್ಗದರ್ಶನದಲ್ಲಿ ಮಹಾಪ್ರಬಂಧವನ್ನು ಸಲ್ಲಿಸಲು ಅನುಮತಿಯನ್ನು ಕೋರಿರುವ ಸಂಬಂಧ ಸಭೆಯಲ್ಲಿ ವಿವರಣೆ ನೀಡಿದರು.<br><br>ಮಾನ್ಯ ಕುಲಪತಿಗಳು  ಮಾತನಾಡಿ, ಮಾರ್ಗದರ್ಶಕರಾದ ಪ್ರೊ. ಎಂ.ಚಂದ್ರಕುಮಾರ್ ರವರು ನಿರಾಪೇಕ್ಷಣಾ ಪತ್ರವನ್ನು ನೀಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಜೆ. ಶಿಲ್ಪಾರವರು ಮಾತನಾಡಿ, ಪ್ರೊ. ಚಂದ್ರಕುಮಾರ್‌ರವರು ವಯೋನಿವೃತ್ತಿ ಹೊಂದಿದ  ನಂತರ ಆಕ್ಷೇಪಣೆ ಮಾಡಬಹುದೇ ಎಂದು ಪ್ರಶ್ನಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಶ್ರೀ ಎಸ್.ಜೆ.ಶಿವಣ್ಣೇಗೌಡರವರು ನಿರಾಪೇಕ್ಷಣಾ ಪತ್ರವನ್ನು ನೀಡಿ ಎಂದು ಕೋರಿದ್ದರೂ ಸಹ ಪ್ರೊ. ಚಂದ್ರಕುಮಾರ್‌ರವರು ನೀಡದಿರುವುದಕ್ಕೆ  ಪರ್ಯಾಯ ವ್ಯವಸ್ಥೆ ಏನು ಎಂದು  ಪ್ರಶ್ನಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಇಂತಹ ಪ್ರಕರಣ ಇದೇ ಮೊದಲ ಬಾರಿಗೆ ಬಂದಿರುವುದು. ವಿದ್ಯಾರ್ಥಿಯು ನಿಯಮಾನುಸಾರ ವಿಶ್ವವಿದ್ಯಾನಿಲಯಕ್ಕೆ ಪಾವತಿಸ ಬೇಕಾದ ಶುಲ್ಕವನ್ನು ಸಹ  ಪಾವತಿಸಿರುವುದಿಲ್ಲ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಸದರಿ ವಿದ್ಯಾರ್ಥಿಯು ಶುಲ್ಕವನ್ನು ಪಾವತಿಸಲು ಸಿದ್ದರಿರುವರೆಂದು ಸಭೆಗೆ ತಿಳಿಸಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಿಂದ ಅನ್ಯಾಯವಾಗದಂತೆ ಪಿಹೆಚ್.ಡಿ ನಿಯಮಗಳ ವ್ಯಾಪ್ತಿಯಲ್ಲಿ ಇರುವುದನ್ನು ಪರಿಶೀಲಿಸಿ ವಿಶ್ವವಿದ್ಯಾನಿಲಯಕ್ಕೆ ಬರಬೇಕಾಗಿರುವ ಶುಲ್ಕವನ್ನು ಸಂಶೋಧನಾ ವಿದ್ಯಾರ್ಥಿಯಿಂದ ಪಾವತಿಸಿಕೊಂಡು ಅವರಿಗೆ ಅನುಮತಿ ಕೊಡಲು ತಮ್ಮ ಅಭ್ಯಂತರವಿಲ್ಲವೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ನಿಯಮಾನುಸಾರ ಏಳು ವರ್ಷಗಳ ಕಾಲಾವಕಾಶ ನೀಡಲಾಗುವುದು. ಪುನ: ಆರು ತಿಂಗಳ ದಂಡ ಶುಲ್ಕದೊಂದಿಗೆ ಪಿಹೆಚ್.ಡಿ ಮಹಾಪ್ರಬಂಧವನ್ನು ಮಂಡಿಸಲು ಕಾಲಾವಕಾಶ ನೀಡಲಾಗುತ್ತದೆ. ಆದರೂ ಈ ಸಂಶೋಧನಾ ವಿದ್ಯಾರ್ಥಿಯು ಹನ್ನೊಂದು ವರ್ಷಗಳಾಗಿದ್ದರೂ ಸಹ ಪಿಹೆಚ್.ಡಿ ಮಹಾಪ್ರಬಂಧವನ್ನು ಮಂಡಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಆಂಥೋನಿ ಪಾಲ್ ರಾಜ್ ಸಿ ಮಾತನಾಡಿ,  ವಿಶೇಷ ಆದ್ಯತೆ ಮೇರೆಗೆ ಅವಕಾಶವಿದ್ದರೆ ಮಾನ್ಯ ಕುಲಪತಿಗಳು ಪರಿಗಣಿಸಬೇಕೆಂದು ತಿಳಿಸಿದರು. |

| | |
|---|---|
| | ಡಾ. ಬಸವರಾಜು ಸಿ. ರವರು ಮಾತನಾಡಿ, ಡಾ. ಚಂದ್ರಕುಮಾರ್‌ರವರು ನಿರಾಪೇಕ್ಷಣಾ ಪತ್ರವನ್ನು ನೀಡಿರುವುದಿಲ್ಲ. ಈ ಸಂಶೋಧನಾ ವಿದ್ಯಾರ್ಥಿಯು ಹಲವು ಬಾರಿ ಮಾರ್ಗದರ್ಶಕರಿಗೆ ಮನವಿಯನ್ನು ಮಾಡಿರುತ್ತಾರೆ.<br><br>ಮಾನ್ಯ ಕುಲಪತಿಯವರು ಮಾತನಾಡಿ, ಡಾ. ಚಂದ್ರಕುಮಾರ್‌ರವರು ವಯೋ ನಿವೃತ್ತಿಯನ್ನು ಹೊಂದಿದ್ದು, ನಿರಾಪೇಕ್ಷಣಾ ಪತ್ರವನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ ಎಂದರು.<br><br>ಶ್ರೀ ಮಹದೇಶು ರವರು ಮಾತನಾಡಿ, ಅವಕಾಶವಿದ್ದರೆ ಅವರಿಗೆ ಮಹಾಪ್ರಬಂಧವನ್ನು ಸಲ್ಲಿಸಲು ಅನುಮತಿಯನ್ನು ನೀಡಿ ಎಂದು ತಿಳಿಸಿದರು. ಇದಕ್ಕೆ ಡಾ. ಶಿಲ್ಪಾರವರು ಕೂಡ ಸಮ್ಮತಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಕಾಲಾವಕಾಶವನ್ನು ನೀಡುವುದಾದರೆ ಅವರಿಗೆ ಹೆಚ್ಚಿನ ದಂಡ ಶುಲ್ಕವನ್ನು ವಿಧಿಸಿ ಮೂರು ತಿಂಗಳುಗಳ ಕಾಲಾವಕಾಶವನ್ನು ಮಾತ್ರ ವಿಸ್ತರಿಸಬಹುದೆಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಖಾಯಂ ಅಧ್ಯಾಪಕರ ಕೊರತೆಯಿದೆ. ಹೀಗಾದರೆ ಹೇಗೆ ಎಂದು ಪ್ರಶ್ನಿಸಿದರು. ಮುಂದುವರೆದು, ಮೂರು ತಿಂಗಳ ಕಾಲಾವಕಾಶದೊಂದಿಗೆ ದಂಡ ಶುಲ್ಕವನ್ನು ವಿಧಿಸಿ ಅನುಮತಿಯನ್ನು ನೀಡಬಹುದೆಂದು ಸಲಹೆ ನೀಡಿದರು.<br><br>ಡಾ. ಆಂಥೋನಿ ಪಾಲ್ ರಾಜ್ ಸಿ ರವರು ಮಾತನಾಡಿ, ಈ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನ ಮುಂದಿನ ಐದು ವರ್ಷದಲ್ಲಿ ಇದೇ ರೀತಿಯ ಪ್ರಕರಣವು ಮರುಕಳಿಸಿದಲ್ಲಿ, ಅಂತಹ ಪ್ರಕರಣಗಳಿಗೂ ಸಹ ಅನ್ವಯವಾಗಬೇಕೆಂದು ತಿಳಿಸಿದರು.<br><br>ಡಾ. ಬಸವರಾಜು .ಸಿ ರವರು ಮಾತನಾಡಿ, ವಿದ್ಯಾರ್ಥಿಗಳಿಗೆ ಇದೊಂದು ಎಚ್ಚರಿಕೆಯಾಗಬೇಕೆಂದು ತಿಳಿಸಿದರು.<br><br>ಶ್ರೀ ಸಿ. ನಾಗರಾಜು ರವರು ಮಾತನಾಡಿ, ಈಗಾಗಲೇ ಪ್ರಾಧ್ಯಾಪಕರ ಕೊರತೆಯಿದೆ. ಮಹಾರಾಜ ಕಾಲೇಜಿನ ಪ್ರಾಧ್ಯಾಪಕರು ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸದೆ ಇರುವವರಿಗೆ ನೋಟಿಸ್ ಜಾರಿ ಮಾಡಿ ಹಾಗೂ ವಿಶ್ವವಿದ್ಯಾನಿಲಯದಿಂದ ದೊರಕುತ್ತಿರುವ ಸೌಲಭ್ಯಗಳನ್ನು ಕಡಿತಗೊಳಿಸಿ ಎಂದು ತಿಳಿಸಿದರು.<br><br>ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಕಾಲಾವಕಾಶವನ್ನು ವಿಸ್ತರಿಸಬಹುದೆಂದು ಸಲಹೆ ನೀಡಿದರು.<br><br>ಶ್ರೀ ಮಹದೇಶು ರವರು ಮಾತನಾಡಿ, ಇಂತಹ ಪ್ರಕರಣ ಮರುಕಳಿಸಿದರೆ ಈ ಸಭೆಯ ತೀರ್ಮಾನ ಮಾರ್ಗಸೂಚಿಯಾಗಬೇಕೆಂದು ತಿಳಿಸಿದರು.<br><br>ಮೇಲ್ಕಂಡ ಸದಸ್ಯರುಗಳ ಅಂಶಗಳನ್ನು ಪರಿಶೀಲಿಸಿದ ಸಭೆಯು ಈ ಕೆಳಕಂಡಂತೆ ತೀರ್ಮಾನಿಸಿತು. |
| ತೀರ್ಮಾನ | **ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ವಿಶ್ವವಿದ್ಯಾನಿಲಯವು ನಿಗದಿಪಡಿಸುವ ದಂಡ ಶುಲ್ಕವನ್ನು ಪಾವತಿಸಿ ಶ್ರೀ ಎಸ್ ಜೆ ಶಿವಣ್ಣೇಗೌಡ, ಸಂಶೋಧನಾ ವಿದ್ಯಾರ್ಥಿ, ಕ್ರೀಡಾ ವಿಜ್ಞಾನ ಮತ್ತು ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಪ್ರೊ. ಮದಿಅಳಗನ್‌ರವರ ಮಾರ್ಗದರ್ಶನದಲ್ಲಿ ಮಹಾಪ್ರಬಂಧವನ್ನು ಮೂರು ತಿಂಗಳೊಳಗೆ ಮಂಡಿಸಲು ಅನುವಾಗುವಂತೆ ಅನುಮತಿ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು**. |

| | |
|---|---|
| ಸಾಮಾನ್ಯ ಸಭೆ 2024/3.9 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಸರ್. ಎಂ. ವಿಶ್ವೇಶ್ವರಯ್ಯ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಸರ್. ಎಂ. ವಿಶ್ವೇಶ್ವರಯ್ಯ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/3.10 | ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | **ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/3.11 | ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಭಿವೃದ್ಧಿ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | **ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಭಿವೃದ್ಧಿ ಕೇಂದ್ರಕ್ಕೆ ಪ್ರೊ. ಮಹಾದೇವಿ ಇವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.8,000/-ಗಳ ಗೌರವಧನದೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/3.12 | ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | **ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಪ್ರೊ. ಅರವಿಂದ ಮಾಲಗತ್ತಿ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.25,000/-ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಸದರಿ ಪ್ರಾಧ್ಯಾಪಕರು ಅಸಮ್ಮತಿ ವ್ಯಕ್ತಪಡಿಸಿದ್ದಲ್ಲಿ ಸೂಕ್ತವಾದ ಅಭ್ಯರ್ಥಿಯನ್ನು ಸದರಿ ಪೀಠಕ್ಕೆ ಆಹ್ವಾನಿಸುವ ವಿವೇಚಾನುಸಾರ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ಸಿಂಡಿಕೇಟ್ ಸಭೆಯು ನೀಡಿತು.** |
| ಸಾಮಾನ್ಯ ಸಭೆ 2024/3.13 | 2023-24ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಎಂ.ಬಿ.ಎ. ಪ್ರೋಗ್ರಾಂಗೆ Sponsored ಕೋಟಾದಡಿಯಲ್ಲಿ ಪ್ರವೇಶಾತಿಗೆ ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | **2023-24ನೇ ಶೈಕ್ಷಣಿಕ ಸಾಲಿಗೆ ಬಿ.ಎನ್.ಬಹದ್ದೂರ್ Family Foundation, USA ಇವರು ತಿಳಿಸಿರುವ 11 ಸೀಟುಗಳನ್ನು Sponsored ಕೋಟಾದಡಿಯಲ್ಲಿ ಎಂ.ಬಿ.ಎ ಪ್ರೋಗ್ರಾಂ ಪ್ರವೇಶಾತಿಗೆ ಅನುಮತಿ ನೀಡಿ ವಿಶ್ವವಿದ್ಯಾನಿಲಯದಿಂದ ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/3.14 | ಡಾ. ಯಶಸ್ವಿನಿ ಎಸ್., ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ರಿಪಬ್ಲಿಕ್ ಆಫ್ ಮಾಲ್ಡೀವ್ಸ್ ರಾಷ್ಟ್ರಕ್ಕೆ ಭೇಟಿ ನೀಡಲು ಅನುಮತಿ ನೀಡಿರುವ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | **ಡಾ. ಯಶಸ್ವಿನಿ ಎಸ್., ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ: 05-01-2024 ರಿಂದ 09-01-2024ರವರೆಗೆ ತಮ್ಮ ಹಕ್ಕಿನಲ್ಲಿರುವ ರಜೆಯನ್ನು** |

| | |
|---|---|
| | **ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ರಿಪಬ್ಲಿಕ್ ಆಫ್ ಮಾಲ್ಡೀವ್ಸ್ ರಾಷ್ಟ್ರಕ್ಕೆ ಪ್ರವಾಸ ನಿಮಿತ್ತ ಹೋಗಿಬರಲು ಘಟನೋತ್ತರ ಮಂಜೂರಾತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2024/3.15** | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣದ ಬಗ್ಗೆ. |
| | ಕುಲಸಚಿವರು ಮಾತನಾಡಿ, ಈಗಾಗಲೇ ಜೆ.ಸಿ. ಕಾಲೇಜು, ಮುಖ್ಯ ರಸ್ತೆ ಇಲ್ಲಿ ಗಂಗೋತ್ರಿ ಶಾಲೆಗೆ ಹೊಂದಿಕೊಂಡಂತಿರುವ ಜಾಗದಲ್ಲಿ ಕಾರ್ಪೊರೇಷನ್‌ರವರು  ಮತ್ತು ವಿವಿ ಇಂಜಿನಿಯರಿಂಗ್ ವಿಭಾಗದವರು ಜಂಟಿಯಾಗಿ ಸ್ಥಳ ತನಿಖೆ ಮಾಡಿ  15 X 15Mt. ಅಳತೆಯ ಖಾಲಿ ನಿವೇಶನದಲ್ಲಿ ಜಾಗವನ್ನು ಪರಿಶೀಲಿಸಿದ್ದಾರೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಈ ಸ್ಥಳವನ್ನು ಆಯ್ಕೆ ಮಾಡಿರುವ ಉದ್ದೇಶವೇನೆಂದರೆ, ವಾಕ್ ಮತ್ತು ಶ್ರವಣ ಸಂಸ್ಥೆಯು ಹತ್ತಿರದಲ್ಲಿದ್ದು, ಅಲ್ಲಿನ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ. ಗಂಗೋತ್ರಿ ಆವರಣದಲ್ಲಿ ಪ್ರಾರಂಭ ಮಾಡಿದರೆ ವಿದ್ಯಾರ್ಥಿಗಳೊಂದಿಗೆ ಸಾರ್ವಜನಿಕರು ಬರುವುದರಿಂದ ನಿಯಂತ್ರಿಸುವುದು ಕಷ್ಟವಾಗುತ್ತದೆ.<br><br>ಶ್ರೀ ಸಿ. ನಾಗರಾಜು ಹಾಗೂ ಡಾ. ಸಿ. ಬಸವರಾಜು ಅವರುಗಳು ಮಾತನಾಡಿ, ಇಂದಿರಾ ಕ್ಯಾಂಟೀನ್ ಸ್ಥಾಪಿಸುವುದು ಒಳ್ಳೆಯ ಕಾರ್ಯಕ್ರಮವಾಗಿದ್ದು, ಇದನ್ನು ಕೂಡಲೇ ಕಾರ್ಯಗತಗೊಳಿಸುವಂತೆ ತಿಳಿಸಿದರು. ಹಾಗೆಯೇ ಎಲ್ಲಾ ಸದಸ್ಯರುಗಳು ಸಹ ದನಿಗೂಡಿಸಿದರು.<br><br>ಶ್ರೀ ನಟರಾಜು ಹೆಚ್.ಎಸ್ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಈಗಾಗಲೇ ಸ್ಥಳ ಪರಿಶೀಲನೆ ಮಾಡಿರುವ ಜಾಗದಲ್ಲಿ ಇಂದಿರಾ ಕ್ಯಾಂಟೀನ್ ತೆರೆಯಲು  ಅಭಿವೃದ್ಧಿ ಅಧಿಕಾರಿಗಳು, ನಾಗರಿಕ ಸೇವಾ ಕೇಂದ್ರ, ಮೈಸೂರು ಮಹಾನಗರ ಪಾಲಿಕೆ, ವಲಯ ಕಛೇರಿ-4, ಮೈಸೂರು  ಇವರು ಕಾರ್ಯಗತಗೊಳಿಸಲು ಹಾಗೂ ಈ ಸಂಬಂಧ ನಿರಾಕ್ಷೇಪಣಾ ಪತ್ರ ನೀಡಲು ಸಿದ್ಧರಾಗಿದ್ದೇವೆಂದು  ತಿಳಿಸಿದರು. |
| **ತೀರ್ಮಾನ** | **ಇಂದಿರಾ ಕ್ಯಾಂಟೀನ್‌ನ್ನು ಜೆ.ಸಿ. ಕಾಲೇಜು ಮುಖ್ಯ ರಸ್ತೆಗೆ ಹೊಂದಿಕೊಂಡಂತಿರುವ ಗಂಗೋತ್ರಿ ಶಾಲೆಯ ಹಿಂಭಾಗದ 15 X 15 Mt. ಅಳತೆಯ ಖಾಲಿ ನಿವೇಶನದಲ್ಲಿ  ಸ್ಥಾಪಿಸಲು ಹಾಗೂ ಅಭಿವೃದ್ಧಿ ಅಧಿಕಾರಿಗಳು, ನಾಗರಿಕ ಸೇವಾ ಕೇಂದ್ರ, ಮೈಸೂರು ಮಹಾನಗರ ಪಾಲಿಕೆ, ವಲಯ ಕಛೇರಿ-4, ಮೈಸೂರು ಇವರು ಕೋರಿರುವ ನಿರಾಕ್ಷೇಪಣಾ ಪತ್ರವನ್ನು ವಿಶ್ವವಿದ್ಯಾನಿಲಯವು ನೀಡಲು ಸಿಂಡಿಕೇಟ್ ಸಭೆಯು ಅನುಮತಿಸಿತು.** |
| **ಸಾಮಾನ್ಯ ಸಭೆ 2024/3.16** | ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಭದ್ರತಾ ಸಂಸ್ಥೆಯನ್ನು ಒಂದು ವರ್ಷದ ಅವಧಿಗೆ ಮುಂದುವರೆಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಮೆ॥ ಶ್ರೀ ರಂಗನಾಥ್ ಎಂಟರ್‌ಪ್ರೈಸಸ್, ಮೈಸೂರು ಭದ್ರತಾ ಸಂಸ್ಥೆಯನ್ನು ದಿನಾಂಕ 05-05-2022 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಒಬ್ಬರು ಭದ್ರತಾ ಸೂಪರ್‌ವೈಸರ್ ಮತ್ತು 174 ಭದ್ರತಾ ಸಿಬ್ಬಂದಿಗಳನ್ನು ವಿಶ್ವವಿದ್ಯಾನಿಲಯ ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳನ್ವಯ ಒಪ್ಪಂದ ಮಾಡಿಕೊಂಡು ಕಾರ್ಯಾದೇಶ ನೀಡಲಾಗಿತ್ತು.<br><br>ಭದ್ರತಾ ಸಂಸ್ಥೆಯ ಟೆಂಡರ್ ಅವಧಿಯು ದಿನಾಂಕ 04-05-2024ರಂದು ಅಂತ್ಯಗೊಂಡಿದ್ದು, ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಕೇಂದ್ರಗಳಾದ ಮಂಡ್ಯ, ಹಾಸನ ಮತ್ತು ಚಾಮರಾಜನಗರಗಳನ್ನು ಪ್ರತ್ಯೇಕಿಸಿದ ನಂತರ ಕೇವಲ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸಲಾಗಿದೆ. |

| | |
|---|---|
| | ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದುದರಿಂದ ಹೊಸದಾಗಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಅರ್ಹ ಬಿಡ್ಡುದಾರರರನ್ನು ಆಯ್ಕೆ ಮಾಡುವವರೆಗೆ ಅಥವಾ ಒಂದು ವರ್ಷದ ಅವಧಿಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಒಬ್ಬ ಸೆಕ್ಯೂರಿಟಿ ಸೂಪರ್ ವೈಸರ್ ಹಾಗೂ 152 ಭದ್ರತಾ ಸಿಬ್ಬಂದಿಗಳನ್ನು ಪ್ರಸುತ ಚಾಲ್ತಿಯಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ಏಪ್ರಿಲ್ ಮಾಹೆಯಲ್ಲಿ ಕನಿಷ್ಠ ವೇತನದ ನಿಬಂಧನೆ ಮತ್ತು ಷರತ್ತುಗಳನ್ವಯ ಹೊರಗುತ್ತಿಗೆ ಆಧಾರದ ಮೇಲೆ 8 ಗಂಟೆಗಳ ಕಾರ್ಯಭಾರದಂತೆ ಕಾರ್ಯನಿರ್ವಹಿಸುತ್ತಿದ್ದು, ಕಾಂಟ್ರಾಕ್ಟರ್‌ರವರು 2% ಸರ್ವಿಸ್ ಶುಲ್ಕ ಎಂದು ಪಡೆಯುತ್ತಾರೆ, ಕಾರ್ಯನಿರ್ವಹಿಸುತ್ತಿರುವ ಭದ್ರತಾ ಸಂಸ್ಥೆಯಾದ ಮೆ. ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರ ಗುತ್ತಿಗೆ ಕರಾರು ಅವಧಿಯನ್ನು ಮುಂದುವರೆಸಲಾಗಿದೆ ಎಂದು ಸಭೆಗೆ ತಿಳಿಸಿದರು ಹಾಗೂ ಅನುಸಮರ್ಥನೆಗಾಗಿ ಕೋರಿದರು.<br><br>ಡಾ. ಸಿ. ಬಸವರಾಜು ರವರು ಮಾತನಾಡಿ, ಮೆ: ರಂಗನಾಥ್ ಎಂಟರ್‌ಪ್ರೈಸಸ್, ಮೈಸೂರು ಅವರ ಟೆಂಡರ್ ಅವಧಿಯನ್ನು ಮುಂದುವರೆಸುವ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ತಂದಿರುವುದಿಲ್ಲ ಎಂದು ಪ್ರಶ್ನಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ನೀತಿ ಸಂಹಿತೆ ಜಾರಿಯಲ್ಲಿದುದರಿಂದ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ ಮತ್ತು ವಿಶ್ವವಿದ್ಯಾನಿಲಯ ಭದ್ರತೆ ಅವಶ್ಯಕತೆಯಿಂದಾಗಿ ಮೆ. ರಂಗನಾಥ್ ಎಂಟರ್‌ಪ್ರೈಸಸ್‌ರವರ ಟೆಂಡರ್ ಮುಂದುವರೆಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ ನಟರಾಜು ಹೆಚ್.ಎಸ್. ರವರು ಮಾತನಾಡಿ, ಕಳೆದ ಎಷ್ಟು ವರ್ಷಗಳಿಂದ ಮೆ: ರಂಗನಾಥ್ ಎಂಟರ್‌ಪ್ರೈಸಸ್ ಮೈಸೂರುರವರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು.<br><br>ಕುಲಸಚಿವರು ಮಾತನಾಡಿ, ಎರಡು ವರ್ಷಗಳಿಂದ ಮೆ: ರಂಗನಾಥ್ ಎಂಟರ್‌ಪ್ರೈಸಸ್ ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಶ್ರೀ ನಟರಾಜು ಹೆಚ್.ಎಸ್ ರವರು ಮಾತನಾಡಿ, ಟೆಂಡರ್ ಪ್ರಕ್ರಿಯೆ ಮುಗಿಯುವುದಕ್ಕೆ ಎಷ್ಟು ಅವಧಿ ಬೇಕಾಗುತ್ತದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಅಂದಾಜು ಮೂರು ತಿಂಗಳುಗಳ ಕಾಲಾವಕಾಶ ಬೇಕಾಗುತ್ತದೆ ಎಂದು ತಿಳಿಸಿದರು. ಹಾಗೂ ಕೆಲವೊಂದು ಪ್ರಕರಣಗಳಲ್ಲಿ ಹೆಚ್ಚಿನ ಕಾಲಾವಕಾಶವು ಬೇಕಿರುತ್ತದೆ ಎಂದರು.<br><br>ಶ್ರೀ ನಟರಾಜು ಹೆಚ್.ಎಸ್. ಮತ್ತು ಶ್ರೀ ಮಹದೇಶುರವರು ಮಾತನಾಡಿ, ಕೆಲವು ಭದ್ರತಾ ಸಿಬ್ಬಂಧಿಗಳಿಗೆ ವೇತನ ಸರಿಯಾಗಿ ನೀಡುತ್ತಿಲ್ಲ, ಇಎಸ್‌ಐ ಮತ್ತು ಇಪಿಎಫ್ ವಂತಿಕೆಯನ್ನು ಕಟ್ಟುತ್ತಿಲ್ಲ ಹಾಗೂ ಭದ್ರತಾ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡುತ್ತಿದ್ದಾರೆ ಎಂದು ಶ್ರೀನಿವಾಸ್‌ರವರು ದೂರಿರುತ್ತಾರೆ ಈ ರೀತಿ ಮಾಡುವುದು ಕ್ರಿಮಿನಲ್ ಅಪರಾಧ ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಯಾವುದೇ ದೂರು ಬಂದಿರದ ಕಾರಣ ಇದು ನಮ್ಮ ಗಮನಕ್ಕೆ ಬಂದಿರುವುದಿಲ್ಲ, ಇಂತಹ ಸಮಸ್ಯೆಗಳು ಇದ್ದರೆ ನೇರವಾಗಿ ತಮ್ಮನ್ನು ಭೇಟಿ ಮಾಡಬೇಕೆಂದು ತಿಳಿಸಿದರು.<br><br>ಶ್ರೀ ಮಹದೇಶು ರವರು ಮಾತನಾಡಿ, ಮೂರು ತಿಂಗಳ ಒಳಗೆ ಟೆಂಡರ್ ಪ್ರಕ್ರಿಯೆಯನ್ನು ಮುಗಿಸುವಂತೆ ಸಲಹೆ ನೀಡಿದರು.<br><br>ಶ್ರೀ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಎಲ್ಲಾ ರೀತಿಯ ಟೆಂಡರ್‌ಗಳ ಪ್ರಕ್ರಿಯೆ ಮುಗಿಸಲು ಮೂರು ತಿಂಗಳ ಅವಧಿ ಬೇಕಾಗುತ್ತದೆಯೇ ಎಂದು ಪ್ರಶ್ನಿಸಿದರು. |

| | |
|---|---|
| | ಕುಲಸಚಿವರು ಮಾತನಾಡಿ, ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುತ್ತದೆ ಎಂದರು.<br>ಶ್ರೀ ಸಿ. ಬಸವರಾಜು ರವರು ಮಾತನಾಡಿ, ಅರುಣ್‌ಕುಮಾರ್ ಎಂಬ ವ್ಯಕ್ತಿಯು ಭದ್ರತಾ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡುವುದು, ಕೆಟ್ಟಪದ ಬಳಸುತ್ತಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.<br>ಶ್ರೀ ಮಹದೇಶು ರವರು ಮಾತನಾಡಿ, ಸೆಕ್ಯೂರಿಟಿ ಗಾರ್ಡ್‌ಗಳಿಗೆ ವಾರಕ್ಕೆ ಒಂದು ರಜೆಯನ್ನು ಸಹ ನೀಡುವುದಿಲ್ಲವೆಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ಹೊಸ ಟೆಂಡರ್‌ನಲ್ಲಿ ಹೊಸ ಷರತ್ತುಗಳನ್ನು ವಿಧಿಸುತ್ತೇವೆಂದು ತಿಳಿಸಿದರು. |
| **ತೀರ್ಮಾನ** | **ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಭದ್ರತಾ ಸಿಬ್ಬಂದಿಗಳ ಹೊರಗುತ್ತಿಗೆಯ ಸಂಬಂಧ ಹೊಸ ಟೆಂಡರ್ ಆಹ್ವಾನಿಸಲು ಜರೂರು ಕ್ರಮವಹಿಸುವುದು ಹಾಗೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಹೊಸ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡುವವರೆಗೆ ಮೆ. ಶ್ರೀ ರಂಗನಾಥ್ ಎಂಟರ್‌ಪ್ರೈಸಸ್, ಮೈಸೂರು ಇವರನ್ನು ಮುಂದುವರೆಸಲು ಸಭೆಯು ಅನುಮತಿಸಿತು.** |
| **ಸಾಮಾನ್ಯ ಸಭೆ 2024/3.17** | Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಗಳ ರಚನೆ/ಪುನರ್‌ರಚನೆ ಬಗ್ಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | **ಅರ್ಕ ಫೌಂಡೇಶನ್, ಅರ್ಕಧಾಮ, ಬೋಗಾದಿ–ಗದ್ದಿಗೆ ಮುಖ್ಯ ರಸ್ತೆ, ಕಣಿಯನಹುಂಡಿ ಗೇಟ್, ಮಾದಹಳ್ಳಿ ಹತ್ತಿರ, ಮೈಸೂರು ಸಂಸ್ಥೆಗೆ Certificate Programme in Community Development ಕೋರ್ಸ್‌ನ ಪಠ್ಯಕ್ರಮ ರಚನೆಗೆ ಹಾಗೂ ಶಾರದಾ ವಿಲಾಸ ಕಾಲೇಜು, ಕೃಷ್ಣಮೂರ್ತಿಪುರಂ, ಮೈಸೂರು ಸಂಸ್ಥೆಯ B.Sc. (Hons.) (Data Science and Artificial Intelligence) (UG) ಕೋರ್ಸ್‌ಗೆ, GETs Academy, # ಸಿಎ–40, ಬೆಳವಾಡಿ ಪೆಟ್ರೋಲ್ ಬಂಕ್ ಹತ್ತಿರ, ಹೂಟಗಳ್ಳಿ, ಮೈಸೂರು ಸಂಸ್ಥೆಯು B.Com.(Hons.)(E-Commerce & Digital Marketing), ii) B.Com.(Hons.) (Finance & Investment) &iii) B.Com.(Hons.) (International Accounting & Finance)(UG) ಕೋರ್ಸ್‌ಗಳಿಗೆ ಹಾಗೂ ಕ್ರೆಸ್ಟ ಪ್ರಥಮ ದರ್ಜೆ ಕಾಲೇಜು, # 182/145/ಸಿ, ಬನ್ನೂರು ರಸ್ತೆ, ಆಲನಹಳ್ಳಿ, ಮೈಸೂರು ಸಂಸ್ಥೆಯು BBA (Modelling and Fashion Management), ii)BBA (Communication and Media Management, iii)B.Com. (Financial Markets), iv) BCA (Internet of Things) and BCA (Cloud Computing and Digital Science (UG) ಕೋರ್ಸ್‌ಗಳಿಗೆ ಈಗಾಗಲೇ ಅಧ್ಯಯನ ಮಂಡಳಿಯನ್ನು ರಚಿಸಲಾಗಿತ್ತು. ಪ್ರಸ್ತುತ, ಈ ಅಧ್ಯಯನ ಮಂಡಳಿಗಳ ಅವಧಿಯು ಅಂತ್ಯಗೊಂಡಿರುವ ಹಿನ್ನೆಲೆಯಲ್ಲಿ B.Sc. (Hons.) (Data Science and Artificial Intelligence) (UG) ಮತ್ತು i) B.Com. (Hons.)(E-Commerce & Digital Marketing), ii) B.Com.(Hons.) (Finance & Investment) & iii) B.Com.(Hons.) (International Accounting & Finance)(UG) ಹಾಗೂ i) BBA (Modelling and Fashion Management), ii) BBA (Communication and Media Management, iii)B.Com. (Financial Markets), iv) BCA (Internet of Things) and BCA (Cloud Computing and Digital Science (UG) ಕೋರ್ಸ್‌ಗಳ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸುವ ಸಂಬಂಧ ಮಾನ್ಯ ಕುಲಪತಿಯವರ ಆದೇಶಾನುಸಾರ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅಧ್ಯಯನ ಮಂಡಳಿಗಳನ್ನು ರಚಿಸಿ/ಪುನರ್‌ರಚಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |

| | |
|---|---|
| ಸಾಮಾನ್ಯ ಸಭೆ 2024/3.18 | Universal Institute For Private Training, Moghera Bin Shoba Street, P.O. Box 6938, Salmiya, Kuwait ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೆಚ್ಚುವರಿಯಾಗಿ 03 ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ನೀಡಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ, Universal Institute For Private Training, Moghera Bin Shoba Street, P.O. Box 6938, Salmiya, Kuwait ಇವರ ಸಂಸ್ಥೆಗೆ ವಿಶ್ವವಿದ್ಯಾನಿಲಯದ Specialized Programme ಅಡಿಯಲ್ಲಿ ಹೆಚ್ಚುವರಿಯಾಗಿ 1. BCA (Artificial Intelligence & Data Science)-60 intake, 2. BA (Applied Psychology)-60 intake and 3. BA (English Literature & Digital Media Communication)-40 intake, ಕೋರ್ಸ್‌ಗಳನ್ನು 2024-25ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/3.19 | ಡಾ. ಸಿ. ಸುಮಂಗಲ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ನೀಡಿದ್ದ ಅನುಮತಿಯನ್ನು ವಿಸ್ತರಿಸಿರುವ ಕುರಿತು ಸಿಂಡಿಕೇಟ್ ಸಭೆಯ ಅನುಸಮರ್ಥನೆ ಪಡೆಯುವುದರ ಬಗೆಗೆ. |
| ತೀರ್ಮಾನ | **ಡಾ. ಸಿ. ಸುಮಂಗಲ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ದಿನಾಂಕ: 26-10-2023 ರಿಂದ 31-12-2023 ರವರೆಗೆ ಅನುಮತಿ ನೀಡಲಾಗಿದ್ದ ಅವಧಿಯನ್ನು ಡಾ. ಸಿ. ಸುಮಂಗಲ ಇವರ ಮನವಿಯ ಮೇರೆಗೆ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ದಿನಾಂಕ: 26-10-2023 ರಿಂದ 02-01-2024 ರವರೆಗೆ ಎರಡು ದಿವಸಗಳಿಗೆ ವಿಸ್ತರಿಸಿ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/3.20 | ಶ್ರೀಮತಿ ಎಸ್. ನೇತ್ರಾ, ಅಧೀಕ್ಷಕರು, ಯೋಜನೆ, ಅಭಿವೃದ್ಧಿ ಮತ್ತು ಅನುಷ್ಠಾನ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ. |
| ತೀರ್ಮಾನ | **ಶ್ರೀಮತಿ ಎಸ್.ನೇತ್ರಾ, ಅಧೀಕ್ಷಕರು, ಯೋಜನೆ, ಅಭಿವೃದ್ಧಿ ಮತ್ತು ಅನುಷ್ಠಾನ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 13-07-2024 ರಿಂದ 28-07-2024ರವರೆಗೆ (16 ದಿನಗಳು) ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯವು ವಿಧಿಸುವ ಷರತ್ತುಗಳಿಗೆ ಬದ್ಧರಾಗಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಪ್ರವಾಸ ನಿಮಿತ್ತ ಖಾಸಗಿಯಾಗಿ ಆಸ್ಟ್ರೇಲಿಯಾಗೆ ಹೋಗಿಬರಲು ಸಿಂಡಿಕೇಟ್ ಸಭೆಯು ಅನುಮತಿಸಿತು.** |
| ಸಾಮಾನ್ಯ ಸಭೆ 2024/3.21 | ಶ್ರೀಮತಿ ನವೀದ ಖಾನಂ, ಪ್ರಥಮ ದರ್ಜೆ ಸಹಾಯಕಿ, ರೇಷ್ಮೆಕೃಷಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸೌದಿ ಅರೇಬಿಯಾ ದೇಶಕ್ಕೆ ಪ್ರವಾಸ ಕೈಗೊಳ್ಳಲು ಅನುಮತಿ ನೀಡಿರುವ ಬಗ್ಗೆ. |
| ತೀರ್ಮಾನ | **ಶ್ರೀಮತಿ ನವೀದ ಖಾನಂ, ಪ್ರಥಮ ದರ್ಜೆ ಸಹಾಯಕಿ, ರೇಷ್ಮೆಕೃಷಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಖಾಸಗಿಯಾಗಿ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದಿನಾಂಕ: 13-05-2024 ರಿಂದ 12-07-2024 ರವರೆಗೆ ವಿಶ್ವವಿದ್ಯಾನಿಲಯವು ವಿಧಿಸುವ ಷರತ್ತುಗಳಿಗೆ ಬದ್ಧರಾಗಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಸೌದಿ ಅರೇಬಿಯಾ ದೇಶಕ್ಕೆ ಪ್ರವಾಸ ನಿಮಿತ್ತ ಹೋಗಿಬರಲು ಸಿಂಡಿಕೇಟ್ ಸಭೆಯ ಅನುಮತಿಯನ್ನು ಕಾಯ್ದಿರಿಸಿ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |

| ಸಾಮಾನ್ಯ ಸಭೆ 2024/3.22 | 2023-24ನೇ ಸಾಲಿನ ವಿವಿಯ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು "ಸಿಂಡಿಕೇಟ್" ಸಭೆಯ ಅನುಮೋದನೆಗಾಗಿ. |
|---|---|
| | ಮಾನ್ಯ ಕುಲಪತಿಗಳು 2023-24ನೇ ಸಾಲಿನ ವಿವಿಯ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು "ಸಿಂಡಿಕೇಟ್" ಸಭೆಯಲ್ಲಿ ಮಂಡಿಸುವಂತೆ ಹಣಕಾಸು ಅಧಿಕಾರಿಗಳಿಗೆ ಸೂಚಿಸಿದರು.<br><br>ಹಣಕಾಸು ಅಧಿಕಾರಿಗಳು 2023-24ನೇ ಸಾಲಿನ ವಿವಿಯ ಆಯವ್ಯಯ ಅಂದಾಜುಗಳಲ್ಲಿ ಪರಿಷ್ಕರಿಸಿರುವುದನ್ನು ಸಭೆಯಲ್ಲಿ ಮಂಡಿಸುತ್ತಾ, 2023-24ನೇ ಸಾಲಿನ ವಿವಿಯ ಆಯವ್ಯಯ ಅಂದಾಜುಗಳಲ್ಲಿ ಕೆಲವೊಂದರಲ್ಲಿ ಅಂದಾಜಿಸಿದ ಮೊತ್ತಕ್ಕಿಂತ ಹೆಚ್ಚು ಹಣ ವ್ಯಯವಾಗಿದೆ ಹಾಗೆಯೇ ಕೆಲವೊಂದರಲ್ಲಿ ಹಣ ವ್ಯಯವು ಕಡಿಮೆಯಾಗಿದೆ ಎಂದು, ಸರ್ಕಾರದಿಂದ ರೂ.50.00 ಲಕ್ಷಗಳ ಅನುದಾನವು ಹೆಚ್ಚುವರಿಯಾಗಿ ಬಂದಿದೆ. ಆದರೆ ಇದನ್ನು ನಾವು ಆಯವ್ಯಯ ಅಂದಾಜಿನಲ್ಲಿ ಸೇರಿಸಿರಲಿಲ್ಲ, ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಭೋಜನಾ ಶುಲ್ಕ ಹಾಗೂ ಇತ್ಯಾದಿಗಳಿಂದ ಬರುವ ಅನುದಾನವನ್ನು ನಾವು ರೂ. 8.00 ಕೋಟಿ ಬರಬಹುದೆಂದು ಅಂದಾಜಿಸಿದ್ದೆವು. ಆದರೆ ನಮಗೆ ರೂ. 9.70 ಕೋಟಿ ಬಂದಿದೆ. ಇದರಿಂದ ನಮಗೆ 1.70 ಕೋಟಿ ಹೆಚ್ಚುವರಿಯಾಗಿ ಅನುದಾನವು ಬಂದಿದೆ ಎಂದು ಸಭೆಯ ಗಮನಕ್ಕೆ ತಂದರು. ಜೊತೆಗೆ ಪ್ರವೇಶ ನೋಂದಣಿ/ಸಂಯೋಜನಾ ಹಾಗೂ ಇತರೆ ಖಾತೆಯಿಂದ ಒಟ್ಟು ವಿಶ್ವವಿದ್ಯಾನಿಲಯಕ್ಕೆ ರೂ. 33 ಕೋಟಿ ರೂ. 20 ಲಕ್ಷ ಅಂದಾಜಿಸಿದ್ದಕ್ಕಿಂತ ಹೆಚ್ಚುವರಿಯಾಗಿ ಆದಾಯ ಬಂದಿದೆ ಎಂದು ಸಭೆಗೆ ಮಾಹಿತಿ ಒದಗಿಸಿದರು.<br><br>ಶ್ರೀ ಸಿ. ನಾಗರಾಜು ರವರು ಮಾತನಾಡುತ್ತಾ, 2023-24ನೇ ಸಾಲಿನ ಆಯವ್ಯಯ ಅಂದಾಜನ್ನು ನಾವು ಮಾರ್ಚ್ ತಿಂಗಳಲ್ಲಿ ಮಂಡಿಸಬೇಕಿತ್ತು. ಇದಕ್ಕೆ ಮಾನ್ಯತೆ ದೊರಕುತ್ತದೆಯೇ ಎಂದು ಪ್ರಶ್ನಿಸುತ್ತಾ, ನೀವು ಇಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡನೆ ಮಾಡುತ್ತಿದ್ದೀರಾ ಇದಕ್ಕೆ ಮಾನ್ಯತೆ ಇದೆಯೇ. ರಾಜ್ಯ ಸರ್ಕಾರವಾಗಲೀ ಅಥವಾ ಕೇಂದ್ರ ಸರ್ಕಾರವಾಗಲೀ ಆಯವ್ಯಯ ಅಂದಾಜನ್ನು ಮಾರ್ಚ್‌ನಲ್ಲಿ ಮಂಡಿಸುವ ಕ್ರಮವನ್ನು ಸಭೆಗೆ ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ಆಯವ್ಯಯದ ಎಲ್ಲಾ ತಯಾರಿ ನಡೆಸಿದ್ದೆವು. ಆ ಸಂದರ್ಭದಲ್ಲಿ ಮಾರ್ಚ್ 15 ರಿಂದ ಚುನಾವಣೆ ನೀತಿ ಸಂಹಿತೆ ಜಾರಿಗೆ ಬಂದಿದ್ದರಿಂದ ಮಂಡಿಸಲು ಸಾಧ್ಯವಾಗಲಿಲ್ಲ. ತದನಂತರ ನೀತಿ ಸಂಹಿತೆ ಜೂನ್ 6 ಕ್ಕೆ ಮುಗಿದಿದ್ದರಿಂದ 10ನೇ ಜೂನ್‌ಗೆ ಹಣಕಾಸು ಸಮಿತಿಗೆ ಮಂಡಿಸಿ, ನಂತರ ಜೂನ್ 12ರ ವಿಶೇಷ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು ಎಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಸರ್ಕಾರದಿಂದ ಬರಬೇಕಾದಂತಹ ಅನುದಾನವೇನಾದರೂ ಬರಬಹುದೆಂಬ ನಿರೀಕ್ಷೆಯಿಂದ ಹಾಗೂ ಮಾರ್ಚ್ 31ರ ನಂತರ ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಹಣ ಇರುತ್ತದೆ, ಎಷ್ಟು ಹಣ ಖರ್ಚಾಗುತ್ತದೆ ಎಂಬ ಆಧಾರದ ಮೇಲೆ ಏಪ್ರಿಲ್ ಮಾಹೆಯಲ್ಲಿ ಆಯವ್ಯಯವನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಿಗೆ ಮಂಡಿಸಲು ತಯಾರಿ ನಡೆಸಿದ್ದೆವು. ಆದರೆ ಚುನಾವಣ ನೀತಿ ಸಂಹಿತೆ ಜಾರಿ ಬಂದಿದ್ದರಿಂದ ಜೂನ್ ಮಾಹೆಯಲ್ಲಿ ಆಯವ್ಯಯವನ್ನು ಮಂಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.<br><br>ಶ್ರೀ ಮಹದೇಶು ಅವರು ಮಾತನಾಡಿ 2023-2024ನೇ ಆಯವ್ಯಯವು 31ನೇ ಮಾರ್ಚ್ 2024ಕ್ಕೆ ಮುಗಿದಿದೆ. 2024-25ನೇ ಸಾಲಿನ ಆಯವ್ಯಯವನ್ನು ನಾವು ಅನುಮೋದಿಸಬೇಕಾದರೆ ಮೊದಲು 2023-24ನೇ ಸಾಲಿನ ಆಯವ್ಯಯದ ಲೆಕ್ಕಪತ್ರಗಳೆಲ್ಲವು ಮುಗಿದಿರಬೇಕಾಗುತ್ತದೆ. ಆದರೆ ನೀವು ಇನ್ನೂ 2023-24ನೇ ಸಾಲಿನ ಆಯವ್ಯಯವನ್ನೇ ಪೂರ್ಣಗೊಳಿಸದೆ ಹೇಗೆ 2024-25ರ ಆಯವ್ಯಯವನ್ನು ಮಂಡಿಸಲಿಕ್ಕೆ ಸಾಧ್ಯವೆಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ನಾವು ಯಾವುದೇ ಹಣಕಾಸು ಸಾಲಿನ ಆಯ-ವ್ಯಯವನ್ನು ಪೂರ್ಣಗೊಳಿಸಬೇಕಾದಲ್ಲಿ ಆಗಸ್ಟ್ ಅಥವಾ ಸೆಪ್ಟೆಂಬರ್ ಮಾಹೆಯವರೆಗೂ ಸಮಯ ಬೇಕಾಗುತ್ತದೆ. ಅಲ್ಲಿಯವರೆಗೂ ನಮಗೆ ಹಣಕಾಸಿನ ವಿಷಯವನ್ನು |

ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ತಾವು ಹೇಳಿದಂತಹ ವಿಷಯಕ್ಕೆ ನನ್ನ ಸಹಮತವಿದೆ. ಆದರೆ ನೀವು ತಾತ್ಕಾಲಿಕ ಆರ್ಥಿಕ ವಿವರಪಟ್ಟಿ (Provisional Balance Sheet) ಅನ್ನು ಈಗಾಗಲೇ ತಯಾರಿ ಮಾಡಬೇಕಾಗಿತ್ತು. 2023-24ನೇ ಸಾಲಿನ ತಾತ್ಕಾಲಿಕ ಆರ್ಥಿಕ ವಿವರಪಟ್ಟಿಯನ್ನು ತಯಾರಿಸದೆ ಇದ್ದಲ್ಲಿ 2024-25ನೇ ಸಾಲಿನ ಆಯವ್ಯಯವನ್ನು ಮಂಡಿಸಲಿಕ್ಕೆ ಸಾಧ್ಯವೇ ಇಲ್ಲವೆಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ 2024-25ನೇ ಸಾಲಿನ "ಕರಡು" ಆಯವ್ಯಯ ಅಂದಾಜನ್ನು ಸಭೆಗೆ ಮಂಡಿಸಿರುವುದು. ಈಗ 2023-24ನೇ ಸಾಲಿನ ಖಚಿತ (Actual) ಆಯವ್ಯಯವನ್ನು ಮಂಡಿಸಲು ಇನ್ನು ಸಮಯಾವಕಾಶ ಬೇಕಾಗುತ್ತದೆ ಜೊತೆಗೆ Provisional Balance Sheet ಅನ್ನು ತಯಾರಿಸಿಲ್ಲ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ 2023-24ನೇ ಸಾಲಿನ ತಾತ್ಕಾಲಿಕ ಆರ್ಥಿಕ ವಿವರಪಟ್ಟಿಯನ್ನು ಸಭೆಗೆ ಮಂಡಿಸದೇ 2024-25ನೇ ಸಾಲಿನ ಕರಡು ಆಯವ್ಯಯ ಅಂದಾಜನ್ನು ಮಂಡಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ತಾವು Provisional Balance Sheet ಅನ್ನು ಸಭೆಗೆ ಮಂಡಿಸಬೇಕಾಗುತ್ತದೆ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಈಗಾಗಲೇ 2023-24ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜಿಗೆ ಹಾಗೂ 2024-25ನೇ ಸಾಲಿನ ಆಯವ್ಯಯದ ಅಂದಾಜು ಕರಡು ಪಟ್ಟಿಗೆ ಅನುಮೋದನೆ ದೊರೆತಿದೆ. ಹಾಗೂ ಸರ್ಕಾರದ ಮಟ್ಟದಲ್ಲೂ ಸಹ ಇದೇ ಪದ್ಧತಿಯನ್ನೇ ಅನುಸರಿಸುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ 108 ವರ್ಷಗಳು ಸಂದಿವೆ. ಹಿಂದಿನಿಂದ ವಿಶ್ವವಿದ್ಯಾನಿಲಯವು ಆಯವ್ಯಯವನ್ನು ಯಾವ ರೀತಿ ಮಂಡಿಸಲಾಗುತ್ತಿತ್ತೋ ಅದೇ ಮಾದರಿಯಲ್ಲಿಯೇ ಈ ಬಾರಿಯು ಆಯವ್ಯಯವನ್ನು ಮಂಡಿಸಲಾಗಿದೆ. ಜೊತೆಗೆ ನಿಮಗೆ 2023-24ನೇ ಸಾಲಿನ ಆಯವ್ಯಯ, ಹಾಗೂ 2024-25ನೇ ಸಾಲಿನ ಆಯವ್ಯದ ಬಗ್ಗೆ ಮಾಹಿತಿಯನ್ನು ದಿನಾಂಕ: 12.06.2024ರಂದೇ ಸಿಂಡಿಕೇಟಿನ ಸದಸ್ಯರುಗಳಿಗೆ ಒದಗಿಸಲಾಗಿತ್ತು. ತಮಗೆ ಯಾವುದೇ ಮಾಹಿತಿಯು ಬೇಕಾದಲ್ಲಿ ಮೊದಲೇ ಹಣಕಾಸು ಅಧಿಕಾರಿಗಳಿಂದ ಪಡೆಯಬಹುದಿತ್ತು. ಹಾಗೂ ಈಗಾಗಲೇ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಯಲ್ಲಿ ಸರ್ಕಾರದ ನಾಮನಿರ್ದೇಶಿತರು, ಸಿಂಡಿಕೇಟ್‌ನ ಸದಸ್ಯರುಗಳು ಹಾಗೂ ಇತರೆ ಸದಸ್ಯರುಗಳು ಸಹ ಇರುತ್ತಾರೆ ಎಂದು ತಿಳಿಸುತ್ತಾ, ಆಯವ್ಯಯಕ್ಕೆ ಸಂಬಂಧಿಸಿದಂತೆ ಹಣಕಾಸು ಸಮಿತಿಗೆ ಮಂಡಿಸಲಾಗಿ ಹಣಕಾಸು ಸಮಿತಿಯು ಅನುಮೋದನೆ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ಮಹದೇಶು ಅವರು ಮಾತನಾಡಿ ಹಣಕಾಸು ವಿಭಾಗದವರು ತಯಾರಿಸುವಂತಹ ಲೆಕ್ಕಪತ್ರಗಳಿಗೂ ಹಾಗೂ ಲೆಕ್ಕಪರಿಶೋಧಕರಿಂದ ತಯಾರಿಸಿದಂತಹ ಲೆಕ್ಕಪತ್ರಗಳಿಗೂ ಸ್ವಲ್ಪ ಮಟ್ಟದ ವ್ಯತ್ಯಾಸವಿರುತ್ತದೆ ಎಂಬುದು ತಿಳಿದಿದೆ. ಆದ್ದರಿಂದ 2023-24ನೇ ಸಾಲಿನ Provisional Balance Sheet ಅನ್ನು ನೀಡಬೇಕೆಂದು ಕೇಳಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ತಾವು ಹಣಕಾಸು ಸಮಿತಿಯಲ್ಲಿ ಇಟ್ಟಂತಹ ಆಯವ್ಯಯಕ್ಕೂ ಈಗ ನೀಡಿರುವಂತಹ ಆಯವ್ಯಯಕ್ಕೂ ರೂ. 21.00 ಕೋಟಿ ವ್ಯತ್ಯಾಸವಿದೆ. ಇದು ಹೇಗೆ ಸಾಧ್ಯ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳೊಂದಿಗೆ ಮಾತನಾಡಿ ಸರಿಪಡಿಸಿದ್ದು, ಜೊತೆಗೆ ಎಲ್ಲಾ ಸದಸ್ಯರುಗಳಿಗೆ ದೂರವಾಣಿ ಮುಖಾಂತರ ತಿಳಿಸಲಾಗಿದೆ. ವಿಶ್ವವಿದ್ಯಾನಿಲಯಕ್ಕೆ ಬರುವಂತಹ ಆದಾಯವು ಕಡಿಮೆಯಾಗಿದ್ದು, ಖರ್ಚು ಜಾಸ್ತಿಯಾಗಿರುವುದರಿಂದಲೂ ಆರ್ಥಿಕ ಕೊರತೆ ಉಂಟಾಗಿದೆ

| | |
|---|---|
| | ಜೊತೆಗೆ ಆರ್ಥಿಕ ವರ್ಷದ ಅಂತಿಮ ಮಾಹೆ ಮಾರ್ಚ್ ತಿಂಗಳಲ್ಲಿ ಬಾಕಿ ಇರುವಂತಹ ಎಲ್ಲಾ ಹುಂಡಿಗಳನ್ನು ಪಾವತಿಸಬೇಕಾಗಿರುವುದರಿಂದ ಕೊನೆಯ ಮಾಹೆಯಲ್ಲಿ ಅಧಿಕ ಖರ್ಚಾಗುವ ಸಂಭವವಿರುತ್ತದೆ ಎಂದು ತಿಳಿಸುತ್ತಾ ತಾವು ಹೇಳುತ್ತಿರುವ ಮೊತ್ತವು ಮುದ್ರಣಕ್ಕೆ ಹೋಗುವ ಸಂದರ್ಭದಲ್ಲಿ ತಪ್ಪಾಗಿ ಮುದ್ರಿತವಾಗಿದೆ, ಜೊತೆಗೆ ಸಭೆಗೆ ಮಂಡಿಸುವುದಕ್ಕೆ ಮುಂಚೆಯೇ ತಪ್ಪನ್ನು ಸರಿಪಡಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಸುದೀರ್ಘ ಚರ್ಚೆಯ ನಂತರ ಶ್ರೀ ಬಸವರಾಜು ಸಿ. ಅವರು ಮಾತನಾಡಿ ತಾವು ಕಳುಹಿಸಿರುವ 2024-25ನೇ ಸಾಲಿನ ಆಯವ್ಯಯದಲ್ಲಿ ಅಂದಾಜು ರೂ. 59.07 ಕೋಟಿಗಳು ಕೊರತೆ ಎಂದು ತೋರಿಸಿದ್ದೀರಿ. ನಂತರ ತಾವು ನೀಡಿದ 2024-25ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ರೂ. 80.35 ಕೋಟಿ ಕೊರತೆ ಎಂದು ತೋರಿಸಿದ್ದೀರಿ. ಇದರಲ್ಲಿ ನಾವು ಯಾವುದನ್ನು ಪರಿಗಣಿಸಬೇಕು ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ರೂ. 80.35 ಕೋಟಿ ಕೊರತೆ ಎಂದು ನಮೂದಿಸಿರುವುದನ್ನೇ ಪರಿಗಣಿಸಬೇಕು ಎಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಹಣಕಾಸು ಸಮಿತಿಯಲ್ಲೂ ಸಹ ತಪ್ಪಾಗಿ ಮುದ್ರಿತವಾಗಿದೆ ಎಂದು ಹೇಳಿ ಸರಿಪಡಿಸಿಕೊಂಡಿದ್ದಾರೆ. ಮೊದಲಿಗೆ ಇವರು ಕಳೆದ ವರ್ಷದ ಆರ್ಥಿಕ ವರ್ಷದ ಕೊರತೆಯನ್ನು ತಿಳಿಸಿ ಪ್ರಸ್ತುತ ವರ್ಷದಲ್ಲಿ ಎಷ್ಟು ಕೊರತೆಯಾಗಬಹುದೆಂಬುದನ್ನು ತಿಳಿಸಬೇಕಾಗಿರುತ್ತದೆ. ಪ್ರಸ್ತುತ ವರ್ಷದಲ್ಲಿ ಹಲವಾರು ವೆಚ್ಚಗಳನ್ನು ನಾವು ಕಡಿಮೆಗೊಳಿಸಿದ್ದೇವೆ ಎಂದು ತಿಳಿಸಿದರು.<br><br>ಶ್ರೀ ಮಹದೇಶು ಅವರು ಮಾತನಾಡಿ 2023-24ನೇ ಸಾಲಿನ Provisional Balance Sheet ಅನ್ನು ನೀಡಿದರೆ 2024-25ನೇ ಸಾಲಿನ ಆಯವ್ಯಯ ಅಂದಾಜಿನ 'ಕರಡು' ಪಟ್ಟಿಯನ್ನು ಅನುಮೋದಿಸಲು ಸಾಧ್ಯವಾಗುತ್ತದೆ ಎಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ನಮ್ಮಲ್ಲಿ ಮೊದಲಿನಿಂದಲೂ Provisional Balance Sheet ಅನ್ನು ತಯಾರಿಸಲು ಅವಕಾಶವಿದ್ದಲ್ಲಿ ಹಾಗೂ ಬೇರೆ ವಿಶ್ವವಿದ್ಯಾನಿಲಯಗಳು Provisional Balance Sheet ಅನ್ನು ತಯಾರಿಸುತ್ತಿದ್ದಾರೆ ಎಂದು ತಿಳಿದುಬಂದಲ್ಲಿ, Provisional Balance Sheet ಅನ್ನು ತಯಾರಿಸಬಹುದೆಂದು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು.<br><br>ಸಿಂಡಿಕೇಟ್ ಸದಸ್ಯರುಗಳು 2023-24ನೇ ಸಾಲಿನ Provisional Balance Sheet ಅನ್ನು ಸಿದ್ಧಪಡಿಸಿ ನೀಡುವಂತೆ ಒತ್ತಾಯಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಈಗ ತಮ್ಮ ಮುಂದಿಟ್ಟಿರುವುದು ಆಯವ್ಯಯ ಅಂದಾಜು ಪಟ್ಟಿ ಮಾತ್ರ. ಇದರಲ್ಲಿ ಕೇವಲ ಎಷ್ಟು ಖರ್ಚಾಗಬಹುದು ಮತ್ತು ಎಷ್ಟು ಆದಾಯ ಬರಬಹುದು ಎಂಬುದರ ಅಂದಾಜು ಪಟ್ಟಿ. ಜೊತೆಗೆ ಈಗ ವ್ಯತ್ಯಾಸವಾಗಿರುವ ಕೊರತೆಯ ಬಗ್ಗೆಯೂ ಸಹ ಸದಸ್ಯರುಗಳಿಗೆ ಸರಿಯಾದ ಮಾಹಿತಿಯನ್ನು ನೀಡಬೇಕಾಗುತ್ತದೆ ಎಂದು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು.<br><br>ಶ್ರೀ ಸಿ. ನಾಗರಾಜು ಅವರು ಮಾತನಾಡಿ ಹಣಕಾಸು ಅಧಿಕಾರಿಗಳಿಗೆ ಸಭೆಗೆ ಸರಿಯಾದ ಮಾಹಿತಿಯನ್ನು ನೀಡುವಂತೆ ತಿಳಿಸುತ್ತಾ, 2023-24ನೇ ಸಾಲಿನ ಹಾಗೂ 2024-25ನೇ ಸಾಲಿನ ಆಯವ್ಯಯ ಅಂದಾಜು 'ಕರಡು' ಪಟ್ಟಿಯ ವಿಷಯವನ್ನು ಮುಂದೂಡುವಂತೆ ಸಭೆಗೆ ತಿಳಿಸಿದರು. |
| **ತೀರ್ಮಾನ** | **ಮುಂದೂಡಲಾಯಿತು**. |

| | |
|---|---|
| **ಸಾಮಾನ್ಯ ಸಭೆ 2024/3.23** | 2024–2025ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿ (ಅನುಬಂಧ–1)ಯನ್ನು "ಸಿಂಡಿಕೇಟ್" ಸಭೆಯ ಅನುಮೋದನೆಗಾಗಿ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.24** | Department of Studies in Genetics & Genomics, Manasagangotri, Mysuru ಮತ್ತು HCG Cancer Care Centre, Bangalore ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| **ತೀರ್ಮಾನ** | HCG Cancer Care Centre, Bangalore ಸಂಸ್ಥೆಯೊಡನೆ Department of Studies in Genetics, Manasagangotri, Mysuru ಇವರು M.Sc in Genetics & Genomics ವಿದ್ಯಾರ್ಥಿಗಳಿಗೆ Skill Data analysis Portal ಹಾಗೂ ಉದ್ಯೋಗಾವಕಾಶವನ್ನು ಕಲ್ಪಿಸುವ ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮತಿಸಿತು. |
| **ಸಾಮಾನ್ಯ ಸಭೆ 2024/3.25** | ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ 02 ಸಭೆಗಳ ತೀರ್ಮಾನಗಳ ಅನುಸಮರ್ಥನೆಗಾಗಿ. |
| **ತೀರ್ಮಾನ** | ದಿನಾಂಕ: 23-05-2023 ಮತ್ತು 07-08-2023 ರಂದು ಜರುಗಿದ 2022–23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಗಳಲ್ಲಿ ತೆಗೆದುಕೊಂಡಿರುವ ತೀರ್ಮಾನಗಳನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2024/3.26** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ವಾಲ್ಮೀಕಿ ಸಂಶೋಧನಾ ಮತ್ತು ವಿಸ್ತರಣ ಕೇಂದ್ರವನ್ನು ಸ್ಥಾಪಿಸುವ ಕುರಿತು. |
| | ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಶ್ರೀ ವಾಲ್ಮೀಕಿ ಸಂಶೋಧನಾ ಮತ್ತು ವಿಸ್ತರಣ ಕೇಂದ್ರವನ್ನು ಸ್ಥಾಪಿಸುವ ಕುರಿತು ಸಿಂಡಿಕೇಟಿನ ಸದಸ್ಯರಾದ ಶ್ರೀ ಸಿ. ನಾಗರಾಜುರವರು ಪ್ರಸ್ತಾಪಿಸಿರುವಂತಹ ವಿಷಯವಾಗಿದ್ದು, ವಿಶ್ವವಿದ್ಯಾನಿಲಯದಲ್ಲಿ ಶ್ರೀ ವಾಲ್ಮೀಕಿ ಸಂಶೋಧನಾ ಮತ್ತು ವಿಸ್ತರಣ ಕೇಂದ್ರವನ್ನು ಸ್ಥಾಪಿಸುವ ಸಂಬಂಧ 2019ರಿಂದಲೂ ಬಹಳಷ್ಟು ಪ್ರಯತ್ನಗಳು ನಡೆದಿದೆ. ಸರ್ಕಾರಕ್ಕೆ ಪತ್ರ ಬರೆದಿದ್ದು, ಸರ್ಕಾರವು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಮೂಲಕ ಏಕರೂಪದ ಅಧಿನಿಯಮ (Statute) ವನ್ನು ರಚಿಸಲಾಗುತ್ತಿದ್ದು, ತದನಂತರ ಅನುಮೊದನೆಯನ್ನು ನೀಡುವುದಾಗಿ ತಿಳಿಸಿದ್ದರು. ಕುಲಸಚಿವರಾಗಿ ಬಂದ ನಂತರ ಶ್ರೀ ವಾಲ್ಮೀಕಿ ಪೀಠವನ್ನು ಸ್ಥಾಪಿಸುವ ಕುರಿತು ವಿಷಯವನ್ನು ತಿಳಿಸಿದ ಸಂದರ್ಭದಲ್ಲೂ ಸಹ ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿದೆ ಎಂದು ತಿಳಿಸಿದರು.<br><br>ಮುಂದುವರೆದು, ಹಿಂದೆ ಇದ್ದಂತಹ ಮಾನ್ಯ ಕುಲಪತಿಗಳು "ಶ್ರೀ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ"ವನ್ನು ಸ್ಥಾಪಿಸುವ ಸಂಬಂಧ ಡಾ. ಸಿ.ಪಿ. ರಾಮಶೇಷ್, ವಿಶ್ರಾಂತ ಗ್ರಂಥಪಾಲಕರು, ಮೈಸೂರು ವಿಶ್ವವಿದ್ಯಾನಿಲಯ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿ, ಸದರಿ ಪೀಠಕ್ಕೆ ವಿಶ್ವವಿದ್ಯಾನಿಲಯದ ಆಂತರಿಕ ಅನುದಾನ ರೂ.5.00 ಲಕ್ಷಗಳನ್ನು ವಿಶ್ವವಿದ್ಯಾನಿಲಯದ "ಸಹೋದ್ಯಮ ಶೀರ್ಷಿಕೆ"ಯಿಂದ ಮೀಸಲಿಡಲಾಗಿತ್ತು. ತದನಂತರ ಡಾ. ಸಿ.ಪಿ. ರಾಮಶೇಷ್ ಅವರು ವರದಿ ಹಾಗೂ ಪ್ರಸ್ತಾವನೆಯನ್ನು ಕುಲಸಚಿವರಿಗೆ ಸಲ್ಲಿಸಿದ್ದರು. ತದನಂತರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ ದಿನಾಂಕ : 12.09.2023ರ ಪತ್ರದಲ್ಲಿ ಸರ್ಕಾರವು ಪ್ರೊ. ಓ. ಅನಂತರಾಮಯ್ಯ, ವಿಶ್ರಾಂತ ಕುಲಪತಿಗಳು ಇವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯ ವರದಿಯ ಶಿಫಾರಸ್ಸಿನಂತೆ ನಿಯಮಾನುಸಾರ ಕ್ರಮವಹಿಸುವಂತೆ ನಿರ್ದೇಶಿಸಿದ್ದರು ಎಂಬ ವಿಷಯವನ್ನು ಸಭೆಗೆ ಸವಿವರವಾಗಿ ತಿಳಿಸುತ್ತಾ, ವಾಲ್ಮೀಕಿ ಪೀಠವಾಗಲಿ, ವ್ಯಾಸ ಪೀಠವನ್ನಾಗಲಿ ಅಥವಾ ಯಾವುದೇ ಹೊಸ ಪೀಠಗಳನ್ನಾಗಲಿ ಸ್ಥಾಪಿಸಬಾರದೆಂಬ ಸರ್ಕಾರದ ಪತ್ರವನ್ನು ಹಾಗೂ |

| | |
|---|---|
| | ದಾಖಲೆಗಳನ್ನು ತಮಗೆಲ್ಲರಿಗೂ ಒದಗಿಸಲಾಗಿದೆ ಎಂದು ತಿಳಿಸುತ್ತಾ, ಸರ್ಕಾರಕ್ಕೆ ಪೀಠವನ್ನು ಸ್ಥಾಪಿಸುವ ಸಂಬಂಧ ಏಕರೂಪದ ಅಧಿನಿಯಮದ ಬಗ್ಗೆ ನಿರ್ದೇಶನ ನೀಡುವಂತೆ ಪತ್ರವನ್ನು ಬರೆಯಲಾಗಿದೆ ಎಂದು ಸಭೆಗೆ ತಿಳಿಸಿದರು.<br><br>ಶ್ರೀ ಸಿ. ನಾಗರಾಜು ರವರು ಮಾತನಾಡುತ್ತಾ, ಕಳೆದ 2023-24ನೇ ಸಾಲಿನಲ್ಲಿ ನಡೆದಂತಹ ವಾಲ್ಮೀಕಿ ಜಯಂತಿಯ ಸಂದರ್ಭದಲ್ಲಿ ಪ್ರಸ್ತುತ ಮುಖ್ಯಮಂತ್ರಿಗಳಾಗಿರುವ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ವಾಲ್ಮೀಕಿ ಅಧ್ಯಯನ ಮತ್ತು ವಿಸ್ತರಣ ಕೇಂದ್ರವನ್ನು ಸ್ಥಾಪಿಸಬೇಕೆಂದು ಸಚಿವರುಗಳ ಜೊತೆ ಚರ್ಚಿಸಿದ್ದಾರೆ. ಈ ಸಂಬಂಧ ಮಾನ್ಯ ಸಚಿವರಾದ ಶ್ರೀ ಚಿಕ್ಕಮಾದುರವರು ಆಸ್ಥೆಯನ್ನು ತೋರಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಉನ್ನತ ಶಿಕ್ಷಣ ಸಚಿವರ ಜೊತೆಯಲ್ಲಿ ಚರ್ಚಿಸಿರುವುದರಿಂದ, ಮಾನ್ಯ ಶಾಸಕರಾದ ಶ್ರೀ ಹರೀಶ್ ಗೌಡರ ನಿಯೋಗದೊಂದಿಗೆ ಶ್ರೀ ವಾಲ್ಮೀಕಿ ಅಧ್ಯಯನ ಮತ್ತು ವಿಸ್ತರಣ ಕೇಂದ್ರವನ್ನು ಸ್ಥಾಪಿಸಲು ವಿಶ್ವವಿದ್ಯಾನಿಲಯದ ಪ್ರಸ್ತಾವನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಿ, ಮಂಜೂರು ಮಾಡಿಸುವ ಜವಾಬ್ದಾರಿ ತಮ್ಮದೆಂದು ಸಭೆಗೆ ತಿಳಿಸಿದರು.<br><br>ಮುಂದುವರೆದು, ಹಿಂದೆ ಇದ್ದಂತಹ ಮಾನ್ಯ ಕುಲಪತಿಗಳು ರೂ. 5.00 ಲಕ್ಷಗಳನ್ನು ನೀಡಿ ತಾತ್ಕಾಲಿಕವಾಗಿ "ಶ್ರೀ ವ್ಯಾಸ ವಾಲ್ಮೀಕಿ ಅಧ್ಯಯನ ಪೀಠ"ವನ್ನು ಪ್ರಾರಂಭಿಸಿದ್ದರೋ ಅದು ಹಾಗೆಯೇ ಮುಂದುವರೆಯುತ್ತಿರಲಿ ಎಂದು ಸಭೆಗೆ ತಿಳಿಸುತ್ತಾ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಮೆರುಗನ್ನು ತಂದಿರುವುದೇ ಶ್ರೀ ವ್ಯಾಸ ವಾಲ್ಮೀಕಿಯವರ ಕೃತಿ. ವಿಶ್ವವಿದ್ಯಾನಿಲಯದಿಂದ ಮತ್ತೆ ರೂ. 5.00 ಲಕ್ಷಗಳನ್ನು ವಾಲ್ಮೀಕಿ ಪೀಠಕ್ಕೆ ಮೀಸಲಿಡಬೇಕೆಂದು ಸಭೆಯಲ್ಲಿ ಮನವಿ ಮಾಡಿದರು.<br><br>ಕುಲಸಚಿವರು ಮಾತನಾಡಿ ರೂ. 5.00 ಲಕ್ಷಗಳಲ್ಲಿ ಪ್ರಸ್ತುತ ರೂ. 34,000/- ಮಾತ್ರ ಹಣ ಬಾಕಿ ಇದೆ ಎಂದು ಸಭೆಯ ಗಮನಕ್ಕೆ ತರುತ್ತಾ, ಅದರಲ್ಲಿ ಸಂದರ್ಶಕ ಪ್ರಾಧ್ಯಾಪಕರಿಗೆ ಮಾಹೆಯಾನ ರೂ. 8,000/-ಗಳ ಗೌರವ ಸಂಭಾವನೆ ಹಾಗೂ ಇತರೆ ಖರ್ಚುಗಳಾಗಿರುವ ಮಾಹಿತಿಯನ್ನು ಒದಗಿಸುವುದಾಗಿ ತಿಳಿಸುತ್ತಾ ಸರ್ಕಾರಕ್ಕೆ ಈಗಾಗಲೇ ಶ್ರೀ ವ್ಯಾಸ ವಾಲ್ಮೀಕಿ ಪೀಠಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಶ್ರೀ ವ್ಯಾಸ ವಾಲ್ಮೀಕಿ ಪೀಠಕ್ಕೆ ರೂ. 5.00 ಲಕ್ಷವನ್ನು ಮೀಸಲಿಡಲು ಒಪ್ಪಿದರು. |
| **ತೀರ್ಮಾನ** | **ಶ್ರೀ ವ್ಯಾಸ ವಾಲ್ಮೀಕಿ ಪೀಠಕ್ಕೆ ರೂ. 5.00 ಲಕ್ಷಗಳನ್ನು ಮೀಸಲಿಟ್ಟು ಪೀಠವನ್ನು ತಾತ್ಕಾಲಿಕವಾಗಿ ಮುಂದುವರೆಸಲು ಹಾಗೂ ಸರ್ಕಾರದ ಅನುಮೋದನೆ ಹಾಗೂ ಅನುದಾನ ದೊರೆತ ನಂತರ ಶ್ರೀ ವಾಲ್ಮೀಕಿ ಸಂಶೋಧನಾ ಮತ್ತು ವಿಸ್ತರಣ ಕೇಂದ್ರವನ್ನು ಸ್ಥಾಪಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು**. |
| **ಸಾಮಾನ್ಯ ಸಭೆ 2024/3.27** | ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಒಟ್ಟು ಅಧ್ಯಯನ ಪೀಠಗಳು, ಅದರ ಸ್ವರೂಪ, ಅವಧಿ, ಕಾರ್ಯ ಚಟುವಟಿಕೆಗಳು, ಸರ್ಕಾರ ಮತ್ತು ಇತರೆ ಮೂಲಗಳಿಂದ ಬಂದ ಒಟ್ಟು ಅನುದಾನ, ಖರ್ಚು ಮಾಡಿರುವ ಮಾಹಿತಿ ಬಗೆಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯವು ಒದಗಿಸಿರುವ ಮಾಹಿತಿಯನ್ನು ಸಭೆಯು ಗಮನಿಸಿತು**. |
| **ಸಾಮಾನ್ಯ ಸಭೆ 2024/3.28** | ಕ್ಯಾತನಹಳ್ಳಿ ಶ್ರೀ ನಾಗರಾಜು, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಪತ್ರದಲ್ಲಿ ನೀಡಿರುವ ಪತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕಕ್ಕೆ ಸಂಬಂಧಿಸಿದ ವಿಷಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸುವ ಬಗ್ಗೆ. |
| | ಶ್ರೀ ನಾಗರಾಜು ಕೆ ರವರು ಮಾತನಾಡಿ, ಯಾವುದೇ ಮೂಲಗಳಿಂದ ಶಿಷ್ಯವೇತನ ಪಡೆಯದೇ PDF ಸಂಶೋಧನೆ ಮಾಡುತ್ತಿರುವ ಪರಿಶಿಷ್ಟ ಪಂಗಡದ ಸಂಶೋಧಕರುಗಳಿಗೆ ಮಾಸಿಕ ರೂ.25,000/- ಗಳ ಶಿಷ್ಯವೇತನ ನೀಡುವ ಸಂಬಂಧ ಕರ್ನಾಟಕ ಸರ್ಕಾರದ |

| | |
|---|---|
| | 2024-25ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡೆಯಾಗಿ ಅಂಗೀಕರಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು ಮಾತನಾಡಿ, ಸರ್ಕಾರ ಯಾವುದೇ ರೀತಿಯ ತೀರ್ಮಾನ ತೆಗೆದುಕೊಂಡರು ನಾವು ಬದ್ಧರಾಗುತ್ತೇವೆಂದು ತಿಳಿಸಿದರು. |
| **ತೀರ್ಮಾನ** | **PDF ಸಂಶೋಧನೆ ಮಾಡುತ್ತಿರುವ ಪರಿಶಿಷ್ಟ ಪಂಗಡದ ಸಂಶೋಧಕರುಗಳಿಗೆ ಸರ್ಕಾರವು ಶಿಷ್ಯವೇತನವನ್ನು ನೀಡಲು ಅನುದಾನ ಬಿಡುಗಡೆ ಮಾಡಿದ್ದಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಹಂಚಿಕೆ ಮಾಡಲು ಕ್ರಮವಹಿಸಲಾಗುವುದೆಂದು ಸಿಂಡಿಕೇಟ್ ಸಭೆಯು ನಿರ್ಧರಿಸಿತು**. |
| **ಸಾಮಾನ್ಯ ಸಭೆ 2024/3.29** | ಡಾ. ಟಿ.ಆರ್.ಚಂದ್ರಶೇಖರ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಇವರು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ಬಗ್ಗೆ ಮಾಹಿತಿ ಕೋರಿರುವ ಬಗ್ಗೆ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.30** | ಸಮಾಜ ಕಲ್ಯಾಣ ಇಲಾಖೆಯವರು ಗುರುತಿಸಿರುವ ಬೋಧಕ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕ ವೃಂದದಲ್ಲಿ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಸರ್ಕಾರವು ನಿರ್ದೇಶನ ನೀಡಿದಲ್ಲಿ, ಭರ್ತಿ ಮಾಡಲು ಅಗತ್ಯ ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |
| **ಸಾಮಾನ್ಯ ಸಭೆ 2024/3.31** | ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ದ್ವಿತೀಯ ಎಂ.ಪಿ.ಎಡ್. ವಿದ್ಯಾರ್ಥಿಯಾಗಿದ್ದ ಶ್ರೀ ಗಗನ್ ಕೆ.ಜೆ. ಎಂಬುವರು ನೀಡಿರುವ ದೂರಿನ ಸಂಬಂಧ ವಿಶ್ವವಿದ್ಯಾನಿಲಯದಿಂದ ರಚಿಸಿರುವ ಪರಿಷ್ಕೃತ ಆಂತರಿಕ ಪರಿಶೀಲನಾ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಈ ಕಾರ್ಯಸೂಚಿಗೆ ಸಂಬಂಧಿಸಿದಂತೆ ಆಂತರಿಕ ಪರಿಶೀಲನಾ ಸಮಿತಿಯು ವರದಿ ಸಲ್ಲಿಸಿರುತ್ತದೆ. ಸಮಿತಿಯು ಸಲ್ಲಿಸಿರುವ ವರದಿಯನ್ನು ಸಭೆಗೆ ಮಂಡಿಸಲಾಗಿದೆಯೆಂದು ತಿಳಿಸಿದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ, ಸಮಿತಿಯ ವರದಿಯಲ್ಲಿ ಡಾ. ವೆಂಕಟೇಶ್.ಸಿ ಅವರು ಕ್ಷಮೆ ಕೇಳಿರುವ ಹಿನ್ನೆಲೆಯಲ್ಲಿ, ಶ್ರೀ ಗಗನ್.ಕೆ.ಜೆ ಅವರು ಈ ಪ್ರಕರಣವನ್ನು ಕೈಬಿಡಲು ನಿರ್ಧರಿಸಿರುತ್ತೇನೆಂದು ಲಿಖಿತವಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಸಮಿತಿ ಸಭೆಯು ನಿರ್ಧರಿಸಿರುತ್ತದೆ. ಈ ವರದಿಯನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಆದ್ದರಿಂದ ಈ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದು ಸೂಕ್ತವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಈ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಾರದು. ಏಕೆಂದರೆ ಆ ವಿದ್ಯಾರ್ಥಿಯು ಮತ್ತೊಮ್ಮೆ ಮನವಿ ಸಲ್ಲಿಸಿದ್ದಾರೆ. ಡಾ. ಟಿ.ಆರ್.ಚಂದ್ರಶೇಖರ್ ಅವರು ಸಮಿತಿ ವರದಿಗೆ ಸಹಿ ಮಾಡದಿರುವುದರಿಂದ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮಂಡಿಸಬಹುದು.<br><br>ಶ್ರೀ ನಟರಾಜು .ಹೆಚ್.ಎಸ್ ಅವರು ಮಾತನಾಡಿ, ಆ ವಿದ್ಯಾರ್ಥಿಯು ನನ್ನನ್ನು ನೇರವಾಗಿ ಭೇಟಿಯಾಗಿ ಎಲ್ಲಾ ಸಮಸ್ಯೆಗಳನ್ನು ಹೇಳಿಕೊಂಡಿರುತ್ತಾರೆ. ನಂತರದಲ್ಲಿ ಡಾ. ವೆಂಕಟೇಶ್.ಸಿ ಅವರು ತಪ್ಪೊಪ್ಪಿಗೆ ನೀಡಿರುವುದರಿಂದ, ಪ್ರಕರಣ ಕೈಬಿಡಲು ನಿರ್ಧರಿಸಿರುತ್ತೇನೆಂದು ತಿಳಿಸಿರುತ್ತಾರೆ. ಇದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ಏಕೆಂದರೆ ಪ್ರೊ. ಸಿ.ವೆಂಕಟೇಶ್ ಅವರು ಕ್ಷಮೆ ಕೇಳಿದ ಕೂಡಲೇ ಆ ವಿದ್ಯಾರ್ಥಿಯು ಆತ್ಮಹತ್ಯೆಗೆ ಪ್ರಯತ್ನ ಮಾಡಿದ್ದನ್ನು ಮರೆತು ಪ್ರಕರಣ ಕೈಬಿಡಲು ಒಪ್ಪಿಕೊಂಡಿರುತ್ತಾರೆಯೇ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಈ ವಿಷಯದ ಬಗ್ಗೆ ಸಾಕಷ್ಟು ವಿದ್ಯಾರ್ಥಿಗಳು ಮತ್ತು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವವರು ಮನವಿ ಸಲ್ಲಿಸಿರುತ್ತಾರೆ. ಈ ವರದಿ |

| | |
|---|---|
| | ಬಗ್ಗೆ ನಮ್ಮ ಒಪ್ಪಿಗೆಯಿರುವುದಿಲ್ಲ. ಶ್ರೀ ಗಗನ್ ವಿದ್ಯಾರ್ಥಿಗೆ ಯಾವ ರೀತಿ ಕಿರುಕುಳ ಆಗಿರುವುದರ ಬಗ್ಗೆ ನಮಗೆ ಮಾಹಿತಿಯಿದೆ. ಆ ವಿದ್ಯಾರ್ಥಿಯೇ ತಿಳಿಸಿರುತ್ತಾರೆ. ಇದು ಶಿಕ್ಷೆಯಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಡಾ. ಸಿ.ವೆಂಕಟೇಶ್ ಅವರು ಈ ವಿದ್ಯಾರ್ಥಿಯೊಂದಿಗೆ ಮಾತನಾಡಿಕೊಂಡು ಬಲವಂತದಿಂದ ಒಪ್ಪಿಸಿರುತ್ತಾರೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಈ ಸಮಿತಿಯಲ್ಲಿ ಹಿರಿಯ ಪ್ರಾಧ್ಯಾಪಕರು ಹಾಗೂ ಸಿಂಡಿಕೇಟ್ ಸದಸ್ಯರುಗಳಿದ್ದಾರೆ. ಸದರಿ ಸಮಿತಿಗೆ ನಾವುಗಳು ಗೌರವ ನೀಡಬೇಕು. ಸಾಕಷ್ಟು ಮನವಿಗಳನ್ನು ಸಲ್ಲಿಸಬಹುದು. ಹಿಂದಿನ ವರದಿಯನ್ನು ಅಂಗೀಕರಿಸದ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯಲ್ಲಿಯೇ ಪರಿಷ್ಕೃತ ಸಮಿತಿಯನ್ನು ರಚಿಸಲಾಗಿತ್ತು. ಈಗ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಈ ವಿಷಯವನ್ನು ಈಗಾಗಲೇ ಮೂರು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ್ದು, ಇನ್ನು ತೀರ್ಮಾನ ಕೈಗೊಂಡಿರುವುದಿಲ್ಲ. ಸಮಿತಿ ಸಭೆಯಲ್ಲಿ ಹಾಜರಿದ್ದು, ನಡವಳಿಯಲ್ಲಿ ಸಹಿ ಹಾಕದಿರುವುದು ಅಸಹಕಾರ ತೋರಿಸುತ್ತದೆ. ಒಪ್ಪಿಗೆಯಿಲ್ಲದಿದ್ದಲ್ಲಿ, ಆ ಸಭೆಯಲ್ಲಿಯೇ ಅಸಮ್ಮತಿ ಪತ್ರವನ್ನು ಲಿಖಿತವಾಗಿ ಸಲ್ಲಿಸಬೇಕು. ಸಮಿತಿ ರಚಿಸುವ ಉದ್ದೇಶವೇನೆಂದರೆ ಎಲ್ಲವನ್ನು ಪರಾಮರ್ಶಿಸಿ ವರದಿ ನೀಡಬೇಕೆಂದು, ವರದಿ ಸಲ್ಲಿಸಿದ ನಂತರವೂ ಮತ್ತೆ ಇನ್ನೊಂದು ಸಮಿತಿ ರಚನೆ ಮಾಡಿ ಎನ್ನುವುದು ಸೂಕ್ತವಲ್ಲ. ಆದ್ದರಿಂದ ಸಮಿತಿಯು ಸಲ್ಲಿಸಿರುವ ವರದಿಯನ್ನು ಅನುಮೋದಿಸಬಹುದೆಂದು ತಿಳಿಸುತ್ತಾ, ಆ ವಿದ್ಯಾರ್ಥಿಯು ಲಿಖಿತವಾಗಿ ವಿಶ್ವವಿದ್ಯಾನಿಲಯಕ್ಕೆ ಮತ್ತೆ ಪತ್ರ ನೀಡಿದಾಗ ಮಾತ್ರ ಮರು ಪರಿಶೀಲನೆ ಮಾಡಬಹುದೆಂದರು. |
| **ತೀರ್ಮಾನ** | **ಪ್ರೊ. ಸೋನರ್ ನಂದಪ್ಪ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಪರಿಷ್ಕೃತ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು**. |
| **ಸಾಮಾನ್ಯ ಸಭೆ 2024/3.32** | ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ನಿಯೋಜನೆ ಮೇರೆಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಇವರ ಹುದ್ದೆಯ ಮೇಲಿನ ಹಕ್ಕನ್ನು "ಲೀನ್" 02 ವರ್ಷಕ್ಕೆ ಅನುಮತಿ ಪಡೆದು ನಂತರ ಅನಧಿಕೃತವಾಗಿ ಗೈರುಹಾಜರಿಯಾಗಿರುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಡಾ.ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ನಿಯೋಜನೆ ಮೇರೆಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಇವರ ಹುದ್ದೆಯ ಮೇಲಿನ ಹಕ್ಕನ್ನು "ಲೀನ್" 2 ವರ್ಷಕ್ಕೆ ಅನುಮತಿ ಪಡೆದು ನಂತರ ಅನಧಿಕೃತವಾಗಿ ಗೈರುಹಾಜರಿಯಾಗಿರುವ ಸಂಬಂಧ ಪ್ರೊ. ಎಂ.ಜಿ.ಮಂಜುನಾಥರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಆದರೆ, ಸದರಿ ಸಮಿತಿಯು ವಿಶ್ವವಿದ್ಯಾನಿಲಯದ ಸಿ.ಸಿ.ಎ ಅಧಿನಿಯಮದನ್ವಯ ವಿಚಾರಣಾ ಸಮಿತಿಯನ್ನು ರಚಿಸಿ, ಇಲಾಖಾ ವಿಚಾರಣೆಯನ್ನು ನಡೆಸಿ ನಿಯಮಾನುಸಾರ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿರುವರೆಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು, ಸಮಿತಿ ರಚಿಸುವುದು ಸಮಸ್ಯೆಯನ್ನು ಪರಿಹರಿಸಬೇಕೆಂದು, ಆದರೆ ಈ ಸಮಿತಿಯವರು ಮತ್ತೊಂದು ಸಮಿತಿಯನ್ನು ರಚಿಸಿ ಎಂದು ಹೇಳಿರುವುದು ಸೂಕ್ತವಲ್ಲವೆಂದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.<br><br>ಕುಲಸಚಿವರು ಮಾತನಾಡಿ, ಕೆ.ಸಿ.ಎಸ್.ಆರ್ ನಿಯಮಾನುಸಾರ ಡಾ. ವಿಶ್ವನಾಥ ಅವರ ಗೈರುಹಾಜರಿಯನ್ನು ವೇತನರಹಿತ ರಜೆಯೆಂದು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.<br><br>ಇದಕ್ಕೆ ಸಭೆಯು ಒಪ್ಪಿಗೆ ಸೂಚಿಸಿತು. |
| **ತೀರ್ಮಾನ** | **ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ** |

| | |
|---|---|
| | **ನಿಯೋಜನೆ ಮೇರೆಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಇವರ ಹುದ್ದೆಯ ಮೇಲಿನ ಹಕ್ಕನ್ನು "ಲೀನ್" 02 ವರ್ಷಕ್ಕೆ ಅನುಮತಿ ಪಡೆದು ನಂತರದ ದಿನಾಂಕ: 01-10-2022 ರಿಂದ 30-11-2023 ರವರೆಗಿನ ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ಅನಧಿಕೃತ ಗೈರುಹಾಜರಿಯನ್ನು ಸಿಸಿಎ ಅಧಿನಿಯಮ ಮತ್ತು ಕೆ.ಸಿ.ಎಸ್.ಆರ್ ನಿಯಮ 106 'ಎ' ಅನ್ವಯ ವೇತನರಹಿತ ರಜೆಯೆಂದು ಪರಿಗಣಿಸಲು ಸಭೆಯು ತೀರ್ಮಾನಿಸಿತು**. |
| **ಸಾಮಾನ್ಯ ಸಭೆ 2024/3.33** | ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಪಿಹೆಚ್.ಡಿ. ಸಂಶೋಧನಾ ಶಿಷ್ಯವೇತನದ ಸಂಬಂಧ ಸಿದ್ಧಪಡಿಸಿರುವ ಮಾರ್ಗಸೂಚಿಯ ಬಗ್ಗೆ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.34** | ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಒಟ್ಟು ಅಧ್ಯಯನ ಪೀಠಗಳು, ಅದರ ಸ್ವರೂಪ, ಅವಧಿ, ಕಾರ್ಯ ಚಟುವಟಿಕೆಗಳು, ಸರ್ಕಾರ ಮತ್ತು ಇತರೆ ಮೂಲಗಳಿಂದ ಬಂದ ಒಟ್ಟು ಅನುದಾನ, ಖರ್ಚು ಮಾಡಿರುವ ಮಾಹಿತಿ ಬಗೆಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯವು ಒದಗಿಸಿರುವ ಮಾಹಿತಿಯನ್ನು ಸಭೆಯು ಗಮನಿಸಿತು**. |
| **ಸಾಮಾನ್ಯ ಸಭೆ 2024/3.35** | ಡಾ. ಟಿ.ಆರ್. ಚಂದ್ರಶೇಖರ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಬಾಕಿ ನೀಡಬೇಕಾಗಿರುವ ಬಿಲ್ ಮೊತ್ತಗಳ ಸಮಗ್ರ ಮಾಹಿತಿಯನ್ನು ಕೋರಿರುವ ಬಗ್ಗೆ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.36** | 2024-25ನೇ ಸಾಲಿನ ಪ್ರಥಮ ವರ್ಷದ ಪ್ರವೇಶಕ್ಕೆ ನಿಷೇಧ/ನಿರ್ಬಂಧ ಮಾಡಿರುವುದರ ಬಗ್ಗೆ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.37** | ಶ್ರೀ ನಟರಾಜ್ ಶಿವಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೋರಿರುವ ಬಗ್ಗೆ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.38** | ಶ್ರೀ ನಟರಾಜ್ ಶಿವಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದಲ್ಲಿ ರಚನೆಯಾಗಿರುವ ಸಮಿತಿಗಳ ವರದಿಗೆ ಸಂಬಂಧಿಸಿದ ಮಾಹಿತಿಯನ್ನು ಕೋರಿರುವ ಬಗ್ಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯವು ಒದಗಿಸಿರುವ ಮಾಹಿತಿಗಳನ್ನು ಸಭೆಯು ಗಮನಿಸಿತು**. |
| **ಸಾಮಾನ್ಯ ಸಭೆ 2024/3.39** | ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಮೂಲಭೂತ ಸೌಲಭ್ಯಗಳು ಹಾಗೂ ಅತಿಥಿ ಉಪನ್ಯಾಸಕರುಗಳ ಆಯ್ಕೆಯ ಬಗ್ಗೆ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.40** | ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಮೆ. : ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ಸ್ ಫೆಡರೇಶನ್ ಲಿಮಿಟೆಡ್, ಮಂಡ್ಯರವರಿಗೆ 16 ದಿನಸಿ ಪದಾರ್ಥಗಳ ದರಗಳನ್ನು ಪರಿಷ್ಕರಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| **ತೀರ್ಮಾನ** | **ಮುಂದೂಡಲಾಯಿತು**. |

| | |
|---|---|
| **ಸಾಮಾನ್ಯ ಸಭೆ 2024/3.41** | ವಿದ್ಯಾರ್ಥಿನಿಲಯಗಳಲ್ಲಿನ ಭೋಜನ ವ್ಯವಸ್ಥೆಗೆ ಅಗತ್ಯವಾದ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುವ ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ ಫೆಡರೇಶನ್ ಲಿ.ರವರಿಗೆ ಪರಿಷ್ಕರಿಸಿರುವ ದರಗಳನ್ನು 2023ರ ಆಗಸ್ಟ್ ಮಾಹೆಯ ಭೋಜನ ವ್ಯವಸ್ಥೆಗೆ ಅಗತ್ಯವಾದ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡಿರುವ ಮೆ.: ವಿನಾಯಕ ಎಂಟರ್‌ಪ್ರೈಸಸ್‌ರವರಿಗೂ ಅನ್ವಯವಾಗುವಂತೆ ಮಾಡಿ 06 ದಿನಸಿ ಪದಾರ್ಥಗಳ ಪರಿಷ್ಕೃತ ದರಗಳ ವ್ಯತ್ಯಾಸದ ಮೊತ್ತಗಳನ್ನು ಪಾವತಿಸಲು ಘಟನೋತ್ತರ ಮಂಜೂರಾತಿ ನೀಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.42** | ಮೆ.: ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ ಇವರು ವಿ.ವಿ. ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಿರುವ ನಂದಿನಿ ಹಾಲು ಹಾಗೂ ಮೊಸರುಗಳ ದರದ ಪರಿಷ್ಕೃತ ವ್ಯತ್ಯಾಸದ ಮೊತ್ತಗಳನ್ನು ಪಾವತಿಸಲು ಮಂಜೂರಾತಿ ನೀಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.43** | ಜನವರಿ/ಫೆಬ್ರವರಿ-2024ರ ಮಾಹೆಯಲ್ಲಿ ನಡೆದ 1, 3 ಮತ್ತು 5ನೇ ಸೆಮಿಸ್ಟರ್‌ನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ (3ನೇ ಸೆಮಿಸ್ಟರ್-ಮಾರ್ಚ್ 2024) ಪರೀಕ್ಷೆಗಳ ಸಂದರ್ಭದಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು All India Sports, Inter University Sports ಹಾಗೂ NCC ಕ್ಯಾಂಪ್‌ಗಳಲ್ಲಿ ಭಾಗವಹಿಸಿದ್ದು, ಈ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆಗಳನ್ನು ನೀಡಿರುವ ಬಗ್ಗೆ. |
| **ತೀರ್ಮಾನ** | **ಜನವರಿ/ಫೆಬ್ರವರಿ-2024ರ ಮಾಹೆಯಲ್ಲಿ ನಡೆದ 1, 3 ಮತ್ತು 5ನೇ ಸೆಮಿಸ್ಟರ್‌ನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ (3ನೇ ಸೆಮಿಸ್ಟರ್-ಮಾರ್ಚ್ 2024) ಪರೀಕ್ಷೆಗಳ ಸಂದರ್ಭದಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು All India Sports, Inter University Sports ಹಾಗೂ NCC ಕ್ಯಾಂಪ್‌ಗಳಲ್ಲಿ ಭಾಗವಹಿಸಿದ್ದು, ಈ ವಿದ್ಯಾರ್ಥಿಗಳಿಗೆ ವಿಶೇಷ ಪರೀಕ್ಷೆಗಳನ್ನು ನಡೆಸಿರುವುದಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು**. |
| **ಸಾಮಾನ್ಯ ಸಭೆ 2024/3.44** | ಡಾ. ಟಿ.ಆರ್. ಚಂದ್ರಶೇಖರ್, ಮಾನ್ಯ ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಾಲಿ ಚಾಲ್ತಿಯಲ್ಲಿರುವ ಹೊರಗುತ್ತಿಗೆಯ ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೋರಿರುವ ಬಗ್ಗೆ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.45** | ಎಂ.ಕೆ. ಶಿವಣ್ಣ, ಪ್ರ.ದ.ಸ. ಇವರು ಕರ್ತವ್ಯಕ್ಕೆ ಹಾಜರಾಗದೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿರುವ ಬಗ್ಗೆ. |
| **ತೀರ್ಮಾನ** | **ಮುಂದೂಡಲಾಯಿತು**. |
| **ಸಾಮಾನ್ಯ ಸಭೆ 2024/3.46** | ಬೋಧಕ ಮತ್ತು ಇತರೆ ಶೈಕ್ಷಣಿಕ ಉದ್ಯೋಗಿಗಳ ನೇಮಕಾತಿ ಮತ್ತು ಪದೋನ್ನತಿಗಾಗಿ ಆಯ್ಕೆ ಸಮಿತಿ ರಚಿಸುವ ಬಗ್ಗೆ. |
| **ತೀರ್ಮಾನ** | **Career Advancement Scheme ಅಡಿಯಲ್ಲಿ ವಿಶ್ವವಿದ್ಯಾನಿಲಯದ ಅರ್ಹ ಪ್ರಾಧ್ಯಾಪಕರುಗಳಿಗೆ UGC Regulations 2018 ಅಧಿನಿಯಮ 5.0 5.1 (I)(a)(iii) & (II)(b)(iii) ರ ಅನ್ವಯ ಪದೋನ್ನತಿ ನೀಡುವುದರ ಸಂಬಂಧ ಆಯ್ಕೆ ಮಂಡಳ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು**. |

**ಇತರೆ ವಿಷಯಗಳು:**

- ಶ್ರೀ ನಾಗರಾಜು ಸಿ. ರವರು ಮಾತನಾಡಿ, ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ವಿದ್ಯಾರ್ಥಿಗಳಿಗೆ ಪೀಠೋಪಕರಣಗಳ ತೊಂದರೆಯಾಗಿರುವುದಾಗಿ ಹಾಗೂ ವಿದ್ಯಾರ್ಥಿಗಳಿಗೆ ಶೌಚಾಲಯ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಇಂತಹ ಹಲವಾರು ಸಮಸ್ಯೆಗಳಿವೆ ಎಂದು ತಿಳಿಸಿದರು. ಇದಕ್ಕುತ್ತರವಾಗಿ ಕುಲಸಚಿವರು ಮಾತನಾಡಿ, ಈಗಾಗಲೇ ತಾಂತ್ರಿಕ ಶಾಲೆ ಕಾಲೇಜಿನ ಪೀಠೋಪಕರಣ ಖರೀದಿಯ ಸಂಬಂಧ ಜೆಮ್ ಪೋರ್ಟಲ್ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆಯೆಂದರು. ಮಾನ್ಯ ಕುಲಪತಿಗಳು ಮಾತನಾಡಿ, ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗೆ ಸಂಬಂಧಿಸಿದಂತೆ ನಿರ್ದೇಶಕರಿಗೆ ಸೂಕ್ತ ಕ್ರಮವಹಿಸುವುದಕ್ಕೆ ತಿಳಿಸುವುದಾಗಿ ತಿಳಿಸಿದರು.
- ಡಾ. ಸಿ. ಬಸವರಾಜು ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ತಾಂತ್ರಿಕ ಶಾಲೆಯ ಕಾಲೇಜಿಗೆ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ಸಿಗುತ್ತಿದ್ದು, ಪ್ರಸ್ತುತವಿರುವ ಉತ್ತಮ ಪ್ರತಿಕ್ರಿಯೆಗಳು ಮುಂದಿನ ದಿನಗಳಲ್ಲೂ ಕಾಪಾಡಿಕೊಳ್ಳಬೇಕೆಂದು ತಿಳಿಸಿದರು ಹಾಗೂ ತಾಂತ್ರಿಕ ಶಾಲೆಯ ಆದಾಯ ಎಷ್ಟಿರಬಹುದು ಎಂದು ಪ್ರಶ್ನಿಸಿದರು?

  ಹಣಕಾಸು ಅಧಿಕಾರಿಗಳು ಮಾಹಿತಿ ನೀಡುವುದಾಗಿ ತಿಳಿಸಿದರು.
- ಮಾನ್ಯ ಕುಲಪತಿಗಳು ಮಾತನಾಡಿ, ಹಿರಿಯ ಡೀನರನ್ನು ಸಿಂಡಿಕೇಟ್ ಸಭೆಯ ಸದಸ್ಯರಾಗಿ ಆಯ್ಕೆ ಮಾಡಬೇಕಾಗಿರುತ್ತದೆ. ಪ್ರಸ್ತುತ ಹಿರಿಯ ಡೀನರಾಗಿರುವ ಪ್ರೊ. ಮಹದೇವಪ್ಪ ಬಿ ಇವರು ನೂತನ ವಿಶ್ವವಿದ್ಯಾನಿಲಯವಾದ ಹಾಸನ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದು, ಇವರಂತೆ ಕಲಾ ನಿಕಾಯದ ಡೀನರಾಗಿರುವ ಪ್ರೊ. ಎಂ.ಜಿ.ಮಂಜುನಾಥ ಇವರು ಸಹ ಹಾಸನ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿರುತ್ತಾರೆ. ಮುಂದುವರೆದು, ವಿವಿಧ ಅಧ್ಯಯನ ಮಂಡಳಿಗಳಲ್ಲಿ ಹಾಸನ, ಮಂಡ್ಯ ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳು ಅಧ್ಯಯನ ಮಂಡಳಿಗಳ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ಕೆಲಸಗಳಿಗೆ ಅವರನ್ನೇ ಅವಲಂಬಿಸುವ ಅನಿವಾರ್ಯತೆ ಉಂಟಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕಿಸಲ್ಪಟ್ಟ ಮೂರು ನೂತನ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರುಗಳ ಬದಲು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳನ್ನು ನೇಮಕ ಮಾಡಿಕೊಳ್ಳಲು ಅಭಿಪ್ರಾಯಿಸಲಾಗಿದೆಯೆಂದು ತಿಳಿಸಿದರು.

  ಮಾನ್ಯ ಕುಲಪತಿಗಳ ಅಭಿಪ್ರಾಯವನ್ನು ಪರಿಗಣಿಸಿದ ಸಭೆಯು ಡೀನರು ಮತ್ತು ಅಧ್ಯಯನ ಮಂಡಳಿಗಳ ಅಧ್ಯಕ್ಷರನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳನ್ನೆ ನೇಮಕ ಮಾಡಿಕೊಳ್ಳಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.
- ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಗಣಿತಶಾಸ್ತ್ರ ವಿಭಾಗದಲ್ಲಿ ಪಠ್ಯಕ್ರಮ ಸಿದ್ಧಪಡಿಸುವಾಗ ಪ್ರಾಯೋಗಿಕ ತರಗತಿಗಳನ್ನು ಹೊರತುಪಡಿಸಿ ಥಿಯೆರಿಗೆ ಸಂಬಂಧಪಟ್ಟಂತೆ ಪಠ್ಯಕ್ರಮ ಸಿದ್ಧಪಡಿಸಿರುತ್ತಾರೆ. ಇದರಿಂದ ಅತಿಥಿ ಉಪನ್ಯಾಸಕರುಗಳಿಗೆ ಕಾರ್ಯಭಾರ ದೊರಕದೆ ಹಲವು ಅತಿಥಿ ಉಪನ್ಯಾಸಕರುಗಳು ವಿಶ್ವವಿದ್ಯಾನಿಲಯ ಘಟಕ ಕಾಲೇಜು ಮತ್ತು ಸಂಯೋಜನೆಗೊಳಪಡುವ ಕಾಲೇಜುಗಳಲ್ಲಿ ಉದ್ಯೋಗ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗುತ್ತದೆ ಎಂದು ತಿಳಿಸಿದರು.

  ಶ್ರೀ ನಟರಾಜು ಹೆಚ್.ಎಸ್. ರವರು ಮಾತನಾಡಿ, ಗಣಿತಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಕಾರ್ಯಭಾರ ವಿಚಾರವಾಗಿ ತೊಂದರೆಯಾಗಿದೆ ಎಂದು ತಿಳಿಸಿದರು ಮಾನ್ಯ ಕುಲಪತಿಯವರು ಮಾತನಾಡಿ, ಇದು ಕಾರ್ಯಭಾರ ಮತ್ತು ಕ್ರೆಡಿಟ್ ವಿಚಾರವಾಗಿ ಅಧ್ಯಯನ ಮಂಡಳಿಯಲ್ಲಿ ಚರ್ಚಿಸಿ ಕ್ರಮಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.
- ಶ್ರೀ ನಾಗರಾಜು ಸಿ. ರವರು ಮಾತನಾಡಿ, ಮಂಡ್ಯ ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರುಗಳ ಬಗ್ಗೆ ಚರ್ಚಿಸಿದಾಗ ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರ ಇದರ ಬಗ್ಗೆ ಕ್ರಮಕೈಗೊಳ್ಳಬೇಕಾಗಿದೆ ಈ ಸಂಬಂಧ ನಾವು ಉನ್ನತ ಶಿಕ್ಷಣ ಇಲಾಖೆಗೆ ಭೇಟಿ ನೀಡಿ ಗೊಂದಲದ ಬಗ್ಗೆ ಚರ್ಚಿಸುತ್ತೇವೆ ಎಂದು ತಿಳಿಸಿದರು.
- ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯನ್ನು ಜುಲೈ 27ರಂದು ವಿಶ್ವವಿದ್ಯಾನಿಲಯದಲ್ಲಿ ಆಚರಿಸಲಾಗುವುದು ಎಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು.

ಈ ಸಂಬಂಧ ಸದಸ್ಯರುಗಳು ಸದರಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳನ್ನಾಗಿ ಯಾರನ್ನು ಆಹ್ವಾನಿಸಬಹುದೆಂದು ಶಿಫಾರಸ್ಸು ಮಾಡುವಂತೆ ತಿಳಿಸಿದರು.

- ಡಾ. ಸಿ. ಬಸವರಾಜು ರವರು ಮಾತನಾಡಿ, ಪ್ರೊ. ಹೆಚ್.ಸಿ. ದೇವರಾಜೇಗೌಡರವರನ್ನು ಯುವರಾಜ ಕಾಲೇಜಿನ ಪ್ರಾಂಶುಪಾಲರನ್ನಾಗಿ ಮರು ನೇಮಕ ಮಾಡಬೇಕೆಂದು ಕೋರಿದರು.
- ಶ್ರೀ ಸಿ. ನಾಗರಾಜು ಅವರು ಮಾತನಾಡಿ, ವಿಚಾರಣಾ ಸಮಿತಿ ರಚಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸುವಂತೆ ತಿಳಿಸಲಾಗುವುದೆಂದು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತಿಳಿಸಿರುತ್ತೀರಿ. ಆದರೆ, ಐದು ತಿಂಗಳಾದರೂ ವರದಿ ಸಲ್ಲಿಸಿರುವುದಿಲ್ಲವೆಂದು ತಿಳಿಸಿದರು. ಈ ಸಂಬಂಧ ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಹೆಚ್.ಸಿ.ದೇವರಾಜೇಗೌಡರವರ ಪ್ರಕರಣವು ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿರುವುದರಿಂದ, ವಿಚಾರಣಾ ಸಮಿತಿ ತನಿಖಾ ಕಾರ್ಯ ಮಾಡುವಂತಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ರಚಿಸಿರುವ ವಿಚಾರಣಾ ಸಮಿತಿಯ ಕಾರ್ಯಗಳಿಗೆ ಹಿನ್ನೆಡೆಯಾಗಿರುತ್ತದೆ ಎಂದು ತಿಳಿಸಿದರು.

  ಡಾ. ಸಿ. ಬಸವರಾಜು ರವರು ಮಾತನಾಡಿ, ವಿಚಾರಣಾ ಸಮಿತಿಯ ಆದೇಶವನ್ನು ಕಾಯ್ದಿರಿಸಿ, ಪ್ರೊ. ಹೆಚ್.ಸಿ.ದೇವರಾಜೇಗೌಡ ಅವರನ್ನು ಯುವರಾಜ ಕಾಲೇಜಿನ ಪ್ರಾಂಶುಪಾಲರನ್ನಾಗಿ ನೇಮಕ ಮಾಡಬೇಕು. ಇಲ್ಲವಾದಲ್ಲಿ ವಿಚಾರಣಾ ಸಮಿತಿಯ ವರದಿ ಸಲ್ಲಿಸುವವರೆಗೂ ಬೇರೆ ಕಾಲೇಜಿಗೆ ಪ್ರಾಂಶುಪಾಲರನ್ನಾಗಿ ನೇಮಕ ಮಾಡಬಾರದೆಂದು ಆಗ್ರಹಿಸಿದರು. ಇದಕ್ಕೆ ಶ್ರೀ ನಟರಾಜ್.ಹೆಚ್.ಎಸ್, ಶ್ರೀ ನಾಗರಾಜು ಕೆ ಹಾಗೂ ಡಾ. ಶಿಲ್ಪರವರು ಬೆಂಬಲ ಸೂಚಿಸಿದರು.

  ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಂಶುಪಾಲರ ನೇಮಕಾತಿಯು ಆಡಳಿತಾತ್ಮಕ ವಿಷಯವಾಗಿರುವುದರಿಂದ, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳ ನೇಮಕಾತಿ ಅಧಿನಿಯಮದ ಅನ್ವಯ ನೇಮಕ ಮಾಡಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.
- ಶ್ರೀ ನಟರಾಜ್ ಹೆಚ್.ಎಸ್., ಶ್ರೀ ನಾಗರಾಜು ಸಿ. ಮತ್ತು ಡಾ. ಬಸವರಾಜು ಸಿ. ಇವರುಗಳು ಮಾತನಾಡಿ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಿರುವುದಾಗಿ ತಿಳಿಸುತ್ತಾ, ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರ, ದಿನಸಿ ಪದಾರ್ಥ ಹಾಗೂ ಇತ್ಯಾದಿಗಳನ್ನು ಪರಿಶೀಲಿಸಿದ್ದು, ಅವಧಿ ಮೀರಿದ ದಿನಸಿ ಪದಾರ್ಥಗಳಿಂದ ಕಳಪೆ ಗುಣಮಟ್ಟದ ಆಹಾರವನ್ನು ನೀಡುತ್ತಿರುವುದು ತಮ್ಮ ಗಮನಕ್ಕೆ ಬಂದಿದ್ದು ಹಾಗೆಯೇ ಶೌಚಾಲಯ ಹಾಗೂ ಸ್ನಾನಗೃಹಗಳಲ್ಲಿ ನೀರಿನ ಪೂರೈಕೆಯ ವ್ಯವಸ್ಥೆ ಇಲ್ಲದಿರುವುದು ಹಾಗೂ ಶುಚಿತ್ವದ ಗುಣಮಟ್ಟ ತೀರ ಕಳಪೆಯಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಈ ಸಂಬಂಧ ಮಾನ್ಯ ಕುಲಪತಿಗಳು ಮಾತನಾಡಿ, ವಿದ್ಯಾರ್ಥಿನಿಲಯ ಹಾಗೂ ನಿರ್ವಹಣೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂಬಂಧ ಒಂದು ವರದಿಯನ್ನು ನೀಡುವ ಸಲುವಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.
- ಶ್ರೀ ನಟರಾಜು ಹೆಚ್.ಎಸ್. ರವರು ಮಾತನಾಡಿ, ಪಿಎಚ್‌ಡಿ ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನವನ್ನು ಪಾವತಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಇದಕ್ಕೆ ಮಾನ್ಯ ಕುಲಪತಿಯವರು ಮಾತನಾಡಿ, ಕಳೆದ ಒಂದು ವರ್ಷದ ಅವಧಿಯ ಹಿಂಬಾಕಿಯಾದರೆ ಪಾವತಿ ಮಾಡಲು ಕ್ರಮವಹಿಸಬಹುದಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಸಚಿವರು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

| | |
|---|---|
| **ಸಹಿ/–** | **ಸಹಿ/–** |
| **ಸದಸ್ಯ ಕಾರ್ಯದರ್ಶಿ ಹಾಗೂ ಕುಲಸಚಿವರು** | **ಅಧ್ಯಕ್ಷರು ಹಾಗೂ ಕುಲಪತಿಗಳು** |